ಭದ್ರಾ ಬಲದಂಡೆ ನೀರಾವರಿ ಕೆಲಸ

656 - ಶ್ರೀ ಎಸ್.ಎ. ರವೀಂದ್ರನಾಥ (ಮಾಯಾಕೊಂಡ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಭದ್ರಾ ಬಲದಂಡೆ ನಾಲೆ ದುರಸ್ತಿ ಕಾಮಗಾರಿಯು ತುಂಬಾ ನಿಧಾನವಾಗಿರುವುದಕ್ಕೆ ಕಾರಣಗಳೇನು?*

ಆ) *ಸರ್ಕಾರದವರು ಸರಿಯಾದ ರೀತಿಯಲ್ಲಿ ಸಿಮೆಂಟನ್ನು ಒದಗಿಸಿ, ಸದರಿ ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರೈಸುವರೇ?*

ಶ್ರೀ ಹೆಚ್.ಡಿ. ದೇವೇಗೌಡ, ಮುಖ್ಯಮಂತ್ರಿಗಳು

ಅ) ಕೆಲವು ಕಾಲ ಸಿಮೆಂಟ್ ಸರಬರಾಜಿನಲ್ಲಿ ಕೊರತೆ ಇದ್ದುದರಿಂದ ಕಾಮಗಾರಿಯ ಪ್ರಗತಿಯಲ್ಲಿ ನಿಧಾನವಾಗಿತ್ತು. ಪ್ರಸ್ತುತ ಕಾರ್ಯಕ್ರಮದ ಪಟ್ಟಿಯಂತೆ ಕಾಮಗಾರಿಯನ್ನು ಮಾರ್ಚ್ 96ರ ವೇಳೆಗೆ ಮುಗಿಸಲು ಕ್ರಮವನ್ನು ಕೈಗೊಳ್ಳಲಾಗಿದೆ.

ಆ) ಹೌದು.

ಕಡಣಿ ಬ್ಯಾರೇಜ್ ದುರಸ್ತಿ ಕ್ರಮ

653 - ಶ್ರೀ ರವಿಕಾಂತ ಎಸ್.ಪಾಟೀಲ್ (ಇಂಡಿ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಇಂಡಿ ಮತಕ್ಷೇತ್ರದಲ್ಲಿ ಬರುವ ಕಡಣಿ ಬ್ಯಾರೇಜ್ಗೆ ಧಕ್ಕೆಯಾಗಿರುವ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ, ಸರ್ಕಾರದಿಂದ ಹೆಚ್ಚು ಹಣ ಮಂಜೂರು ಮಾಡಿ ಬ್ಯಾರೇಜಿನ ದುರಸ್ತಿ ಕಾರ್ಯವನ್ನು ಮಾಡಲು ಕೂಡಲೇ ಕ್ರಮ ಕೈಗೊಳ್ಳುವರೇ?*

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್, ಸಣ್ಣ ನೀರಾವರಿ ರಾಜ್ಯ ಸಚಿವೆಯರು

ಅ) ಬಂದಿದೆ.

ಆ) ಕಡಣಿ ಬ್ಯಾರೇಜಿನ ದುರಸ್ತಿ ಕಾಮಗಾರಿಯನ್ನು ಭೂ ಸೇನಾ ನಿಗಮ ಕೈಗೊಂಡಿದ್ದು, ಬಿಜಾಪುರ ಜಿಲ್ಲಾಧಿಕಾರಿಗಳು ಈ ಕಾಮಗಾರಿಗೆ 10 ಲಕ್ಷ ರೂ. ಅನುದಾನ ಬಿಡುಗಡೆ ಮಾಡಿದ್ದಾರೆ. ಇದರಲ್ಲಿ ನಿಗಮವು ಈ ಕಾಮಗಾರಿಗೆ 50,000 ರೂ. ವೆಚ್ಚ ಮಾಡಿದ್ದಾರೆ. ಉಳಿದ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸುವ ಬಗ್ಗೆ ಕ್ರಮ ತೆಗೆದುಕೊಳ್ಳಲು ಭೂ ಸೇನಾ ನಿಗಮಕ್ಕೆ ಸೂಚನೆ ನೀಡಲಾಗುವುದು.

ಸಭೆಯ ಮುಂದಿಡಲಾಗುವ ಕಾಗದಪತ್ರಗಳ ಪಟ್ಟಿ

I ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿ) : ಮಾನ್ಯ ಅಧ್ಯಕ್ಷರೆ,

1978ನೇ ಇಸವಿಯ ಕರ್ನಾಟಕ ನಾಗರೀಕ ಸೇವಾ ಅಧಿನಿಯಮದ 8 (3)ನೇ ಕಲಮಿನ ಮೇರೆಗೆ ;

1) ಕರ್ನಾಟಕ ರಾಜ್ಯ ಆರಕ್ಷಕ ಸೇವೆಗಳು (ನೇಮಕಾತಿ) ನಿಯಮಗಳು 1967ಕ್ಕೆ ತಿದ್ದುಪಡಿ ಮಾಡುವ ಸಂಬಂಧದಲ್ಲಿ ದಿನಾಂಕ15.9.1994 ರಂದು ಹೊರಡಿಸಲಾದ ಸಿಆಸುಇ 13ಎಸ್ಆರ್ಡಿ 94ನೇ ಕ್ರಮಾಂಕದ ಅಧಿಸೂಚನೆ;

2) ಕರ್ನಾಟಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ (ಕೆಲವು ಲಿಪಿಕೇತರ ಕೇಡರ್ಗಳು) (ನೇಮಕಾತಿ) ನಿಯಮಗಳು 1993ಕ್ಕೆ ತಿದ್ದುಪಡಿ ಮಾಡುವ

ಸಂಭಂದದಲ್ಲಿ ದಿನಾಂಕ 19.4.1995 ರಂದು ಹೊರಡಿಸತಾದ ಸಿಆಸುಇ 44 ಸೇನಿಡಿ 93ನೇ ಕ್ರಮಾಂಕದ ಅಧಿಸೂಚನೆ;

3) ಕರ್ನಾಟಕ ಆಡಳಿತ ಸೇವೆಗಳು(ನೇಮಕಾತಿ) ನಿಯಮಗಳು 1994ಕ್ಕೆ ತಿದ್ದುಪಡಿ ಮಾಡುವ ಸಂಭಂಧದಲ್ಲಿ ದಿನಾಂಕ 20.4.1995 ರಂದು ಹೊರಡಿಸಲಾದ ಸಿಆಸುಇ 7 ಎಸ್ಆರ್ಡಿ 93ನೇ ಕ್ರಮಾಂಕದ ಅಧಿಸೂಚನೆ;

4) ಕರ್ನಾಟಕ ವಾಣಿಜ್ಯ ತೆರಿಗೆ ಇಲಾಖೆಯ (ನೇಮಕಾತಿ) ನಿಯಮಗಳು 1994ಕ್ಕೆ ತಿದ್ದುಪಡಿ ಮಾಡುವ ಸಂಬಂಧದಲ್ಲಿ ದಿನಾಂಕ10.5.19995 ರಂದು ಹೊರಡಿಸಲಾದ ಸಿಆಸುಇ 90 ಎಸ್ಆರ್ಡಿ 94ನೇ ಕ್ರಮಾಂಕದ ಅಧಿಸೂಚನೆ;

1956ನೇ ಇಸವಿಯ ಕರ್ನಾಟಕ ಸಚಿವರುಗಳು ಸಂಬಳ ಹಾಗೂ ಭತ್ಯೆಗಳ ಅಧಿನಿಯಮದ 12(2)(ಎ)(ಬಿ)ನೇ ಕಲಮಿನ ಮೇರೆಗೆ;

5) ಶ್ರೀ ಜೆ.ಹೆಚ್. ಪಟೇಲ್, ಉಪ ಮುಖ್ಯ ಮಂತ್ರಿಗಳು ಮತ್ತು ಇಂಧನ ಮತ್ತು ಪ್ರವಾಸೋದ್ಯಮ ಮಂತ್ರಿಗಳು, ಶ್ರೀಆರ್. ವಿ.ದೇಶಪಾಂಡೆ, ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಮಂತ್ರಿಗಳು ಮತ್ತು ಶ್ರೀ ಕೇ.ಜಯಪ್ರಕಾಶ್ ಹೆಗಡೆ, ಬಂದರು ಮತ್ತು ಮಿನುಗಾರಿಕಾ ರಾಜ್ಯ ಮಹತ್ತರಗಳ ವಿದೇಶ ಪ್ರವಾಸ ಸಂಬಂಧದಲ್ಲಿ ದಿನಾಂಕ 27.4.1995 ರಂದು ಹೊರಡಿಸಲಾದ ಡಿಪಿಎಆರ್ 60 ಜಿಎಎಮ್ 95ರ ಆದೇಶ;

6. ಶ್ರೀ ಜೆ.ಹೆಚ್. ಪಟೇಲ್, ಉಪಮುಖ್ಯ ಮಂತ್ರಿ ಮತ್ತು ಇಂಧನ ಮತ್ತು ಪ್ರವಾಸೋದ್ಯಮ ಮಂತ್ರಿಗಳು, ಶ್ರೀ ಆರ್.ವಿ. ದೇಶಪಾಂಡೆ,ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಮಂತ್ರಿಗಳು ಮತ್ತು ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ, ಬಂದರು ಮತ್ತು ಮೀನೂಗಾರಿಕೆ ರಾಜ್ಯ ಮಂತ್ರಿಗಳು ವಿದೇಶ ಪ್ರವಾಸದ ಸಂಬಂಧದಲ್ಲಿ ದಿನಾಂಕ 29.4.1995ರಂದು ಹೊರಡಿಸಲಾದ ಡಿಪಿಎಆರ್ 60 ಜಿಎಎಮ್ 95ನೇ ಕ್ರಮಾಂಕದ ಅಡೆಂಡಮ್ (ಜೋಡಿಕೆ).

7) ಶ್ರೀ ಎಸ್.ಡಿ. ಜಯರಾಂ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳ ವಿದೇಶ ಪ್ರವಾಸದ ಸಂಬಂಧದಲ್ಲಿ ದಿನಾಂಕ 12.5.1995 ರಂದು ಹೊರಡಿಸಲಾದ ಡಿಪಿಎಆರ್ 62 ಜಿಎಎಮ್ 95ನೇ ಕ್ರಮಾಂಕದ ಆದೇಶ.

8) ಶ್ರೀ ಸಿ. ಭೈರೇಗೌಡ, ಕೃಷಿ ಸಚಿವರು ಮತ್ತು ಶ್ರೀ ಡಿ.ಟಿ. ಜಯಕುಮಾರ್ ತೋಟಗಾರಿಕಾ ರಾಜ್ಯ ಸಚಿವರ ವಿದೇಶ ಪ್ರವಾಸ ಸಂಬಂಧದಲ್ಲಿ ದಿನಾಂಕ 13ನೇ ಜುಲೈ 1995ರಂದು ಹೊರಡಿಸಲಾದ ಡಿಪಿಎಆರ್ 35 ಜಿಎಎಮ್ 95ರ ಆದೇಶ.

9) ಶ್ರೀ ಹೆಚ್.ಡಿ. ದೇವೇಗೌಡ, ಮುಖ್ಯ ಮಂತ್ರಿ, ಶ್ರೀ ಆರ್.ವಿ. ದೇಶಪಾಂಡೆ, ಭಾರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿ ಮತ್ತು ಶ್ರೀ ರೋಷನ್ ಬೇಗ್, ಬೆಂಗಳೂರು ನಗರಾಭಿವೃದ್ಧಿ ಮತ್ತು ವಕ್ಫ್ ರಾಜ್ಯ ಮಂತ್ರಿಗಳ ವಿದೇಶ ಪ್ರವಾಸದ ಬಗ್ಗೆ ದಿನಾಂಕ 22.7.1995ರಂದು ಹೊರಡಿಸಲಾದ ಡಿಪಿಎಆರ್ 75 ಜಿಎಎಮ್ 95ರ ಆದೇಶ,

1976ರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧಿನಿಯಮದ 47ಎ ಕಲುಮಿನ ಮೇರೆಗೆ.

10) 1993-94ನೇ ಸಾಲಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿ.

1964ರ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಧಿನಿಯಮದ 25(5) (ಎ) ಕಲಮಿನ ಮೇರೆಗೆ.

11) 1993-94ನೇ ಸಾಲಿನ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯ ವಾರ್ಷಿಕ ಲೆಕ್ಕ ಮತ್ತು ಲೆಕ್ಕ ಪರೀಕ್ಷಕರ ವರದಿಗಳನ್ನು ಮಂಡಿಸುತ್ತೇನೆ.

II. ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿ)

(ಶ್ರೀ ಜೆ.ಹೆಚ್.ಪಟೇಲ್ ಉಪ ಮುಖ್ಯಮಂತ್ರಿ ಅವರ ಪರವಾಗಿ) ಮಾನ್ಯ ಅಧ್ಯಕ್ಷರೆ, 1948ರ ವಿದ್ಯುಚ್ಛಕ್ತಿ (ಸರಬರಾಜು ಅಧಿನಿಯಮದ 75(1)ನೇ ಕಲಮಿನ ಮೇರೆಗೆ.

1) 1993-94ನೇ ಸಾಲಿನ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ವಾರ್ಷಿಕ ಆಡಳಿತ ವರದಿ. 1956ರ ಕಂಪನಿಗಳ ಕಾಯ್ದೆಯ 619ಎ ಕಲಮಿನ ಮೇರೆಗೆ.

2) 1992-93ನೇ ಸಾಲಿನ ಜಂಗಲ್ ಲಾಡ್ಜಸ್ ಮತ್ತು ರಿಸಾರ್ಟ್ಸ್ ನಿಮಯಮಿತದ 13 ನೇ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ.

III. ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿ)

(ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಮಂತ್ರಿ ಅವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಭಾರತದ ಸಂವಿಧಾನೀದ 213(2)(ಎ) ಅನುಚ್ಛೇದದ ಮೇರೆಗೆ.

1) 1995ನೇ ಇಸವಿ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) (ಸಂಖ್ಯೆ 5) ಅಧ್ಯಾದೇಶಕ್ಕೆ ಸಂಬಂಧಿಸಿದಂತೆ ದಿನಾಂಕ 5.6.95ರಂದು ಹೊರಡಿಸಲಾದ ಲಾ 10 ಎಲ್‌ಜಿಎಸ್ 95ರ ಅಧಿಸೂಚನೆ.

1964ನೇ ಸಾಲಿನ ಕರ್ನಾಟಕ ಭೂ ಕಂದಾಯ ಅಧಿನಿಯಮ ಪ್ರಕರಣ 194(2)ನೇ ಕಲಮಿನ ಮೇರೆಗೆ.

2) ಧಾರವಾಡ ಜಿಲ್ಲೆಯ ಮುಂಡರಗಿ ತಾಲ್ಲೂಕಿನ ಒಂದು ಗ್ರಾಮದ 1990-91ನೇ ಸಾಲಿನ ಭೂ ಕಂದಾಯ 2,524.52ರೂ.ಗಳನ್ನು ಮಾನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 3.4.1995 ರಂದು ಹೊರಡಿಸಲಾದ ಆರ್‌ಡಿ 67 ಟಿಆರ್‌ಎಂ 95ರ ಕ್ರಮಾಂಕದ ಅಧಿಸೂಚನೆ.

3) ಧಾರವಾಡ ಜಿಲ್ಲೆಯ ಹುಬ್ಬಳ್ಳಿ ತಾಲ್ಲೂಕಿನ 20 ಗ್ರಾಮಗಳ 1990-91ನೇ ಸಾಲಿನ ಭೂ ಕಂದಾಯ 1,43 475.79 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 3.4.1995 ರಂದು ಹೊರಡಿಸಲಾದ ಆರ್‌ಡಿ 36 ಟಿಆರ್‌ಎಂ 95ನೇ ಕ್ರಮಾಂಕದ ಅಧಿಸೂಚನೆ.

4) ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ 8 ಗ್ರಾಮಗಳ 1974-75ನೇ ಸಾಲಿನ ಭೂ ಕಂದಾಯ 19,372,47ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 3.4.1995 ರಂದು ಹೊರಡಿಸಲಾದ ಆರ್‌ಡಿ 22 ಟಿಆರ್‌ಎಂ 95ನೇ ಕ್ರಮಾಂಕದ ಅಧಿಸೂಚನೆ.

5) ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ 9 ಗ್ರಾಮಗಳ 1990-91ನೇ ಸಾಲಿನ ಭೂ ಕಂದಾಯ 62,015.72ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 3.4.1995 ರಂದು ಹೊರಡಿಸಲಾದ ಆರ್‌ಡಿ 49 ಟಿಆರ್‌ಎಂ 95ನೇ ಕ್ರಮಾಂಕದ ಅಧಿಸೂಚನೆ.

6) ಧಾರವಾಡ ಜಿಲ್ಲೆಯ ಹುಬ್ಬಳ್ಳಿ ತಾಲ್ಲೂಕಿನ 4 ಗ್ರಾಮಗಳ 1990-91ನೇ ಸಾಲಿನ ಭೂ ಕಂದಾಯ 5,963.31 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 3.4.1995 ರಂದು ಹೊರಡಿಸಲಾದ ಆರ್‌ಡಿ 41 ಟಿಆರ್‌ಎಂ 95ನೇ ಕ್ರಮಾಂಕದ ಅಧಿಸೂಚನೆ.

7) ಬಿಜಾಪುರ ಜಿಲ್ಲೆಯ ಬೀಳಗಿ ತಾಲ್ಲೂಕಿಂ 17 ಗ್ರಾಮಗಳ 1990-91ನೇ ಸಾಲಿನ ಭೂ ಕಂದಾಯ 33,588.40 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 3.4.1995 ರಂದು ಹೊರಡಿಸಲಾದ ಆರ್‌ಡಿ 70 ಟಿಆರ್‌ಎಂ 1995 ನೇ ಕ್ರಮಾಂಕದ ಅಧಿಸೂಚನೆ.

8) ಧಾರವಾಡ ಜಿಲ್ಲೆಯ ಮುಂಡರಗಿ ತಾಲ್ಲೂಕಿನ 35 ಗ್ರಾಮಗಳ 1991-92 ನೇ ಸಾಲಿನ ಭೂ ಕಂದಾಯ 18,364.81ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 4.4.1995 ರಂದು ಹೊರಡಿಸಲಾದ ಆರ್‌ಡಿ 68 ಟಿಆರ್‌ಎಂ 95ನೇ ಕ್ರಮಾಂಕದ ಅಧಿಸೂಚನೆ.

9) ವಿಜಾಪುರ ಜಿಲ್ಲೆಯ ಬೀಳಗಿ ತಾಲ್ಲೂಕಿನ 21 ಗ್ರಾಮಗಳ 1990-91ನೇ ಸಾಲಿನ ಭೂ ಕಂದಾಯ 67,661.41 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 4.4.1995ರಂದು ಹೊರಡಿಸಲಾದ ಆರ್‌ಡಿ 66 ಟಿಆರ್‌ಎಂ 95ನೇ ಕ್ರಮಾಂಕದ ಅಧಿಸೂಚನೆ.

10) ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕಿನ 25 ಗ್ರಾಮಗಳ 1978-79ನೇ ಸಾಲಿನ ಭೂ ಕಂದಾಯ ರೂ. 39,256.51 ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 4.4.1995 ರಂದು ಹೊರಡಿಸಲಾದ ಆರ್‌ಡಿ 69 ಟಿಆರ್‌ಎಂ 95ನೇ ಕ್ರಮಾಂಕದ ಅಧಿಸೂಚನೆ.

11) ರಾಯಚೂರು ಜಿಲ್ಲೆಯ ಗಂಗಾವತಿ ತಾಲ್ಲೂಕಿನ 60 ಗ್ರಾಮಗಳ 1993-94ನೇ ಸಾಲಿನ ಭೂ ಕಂದಾಯ 21,242.10ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 6.4.1995 ರಂದು ಹೊರಡಿಸಲಾದ ಆರ್‌ಡಿ 261 ಟಿಆರ್‌ಎಂ 94ನೇ ಕ್ರಮಾಂಕದ ತಿದ್ದುಪಡಿ

12) ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ 21 ಗ್ರಾಮಗಳ 1992-93ನೇ ಸಾಲಿನ ಭೂ ಕಂದಾಯ 26,138.47 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 25.4.1995 ರಂದು ಹೊರಡಿಸಲಾದ ಆರ್‌ಡಿ 52 ಟಿಆರ್‌ಎಂ 95ನೇ ಕ್ರಮಾಂಕದ ಅಧಿಸೂಚನೆ.

13) ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ 21 ಗ್ರಾಮಗಳ 1991-92ನೇ ಸಾಲಿನ ಭೂ ಕಂದಾಯ 59,701.43 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 25.4.1995 ರಂದು ಹೊರಡಿಸಲಾದ ಆರ್‌ಡಿ 48 ಟಿಆರ್‌ಎಂ 95ನೇ ಕ್ರಮಾಂಕದ ಅಧಿಸೂಚನೆ.

14) ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕಿನ 16 ಗ್ರಾಮಗಳ 1989-90 ನೇ ಸಾಲಿನ ಭೂ ಕಂದಾಯ 16,622.03ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 25.4.1995 ರಂದು ಹೊರಡಿಸಲಾದ ಆರ್‌ಡಿ 40 ಟಿಆರ್‌ಎಂ 95ನೇ ಕ್ರಮಾಂಕದ ಅಧಿಸೂಚನೆ.

15) ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ 23 ಗ್ರಾಮಗಳ 1990-91ನೇ ಸಾಲಿನ ಭೂ ಕಂದಾಯ 18,289.31 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 26.4.1995 ರಂದು ಹೊರಡಿಸಲಾದ ಆರ್‌ಡಿ 71 ಟಿಆರ್‌ಎಂ 95ನೇ ಕ್ರಮಾಂಕದ ಅಧಿಸೂಚನೆ.

16) ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ಹಾಗೂ ಸೊರಬ ತಾಲ್ಲೂಕಿನ 18 ಗ್ರಾಮಗ 1992-93ನೇ ಸಾಲಿನ ಭೂ ಕಂದಾಯ 59,746.29ರೂ.ಗಳನ್ನು ಮನ್ನಾ ಮಾಡುವ

ಸಂಬಂಧದಲ್ಲಿ ದಿನಾಂಕ 26.4.1995 ರಂದು ಹೊರಡಿಸಲಾದ ಆರ್‌ಡಿ 34 ಟಿಆರ್‌ಎಂ 95ನೇ ಕ್ರಮಾಂಕದ ಅಧಿಸೂಚನೆ.

17) ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ 24 ಗ್ರಾಮಗಳ 1992-93 ನೇ ಸಾಲಿನ ಭೂ ಕಂದಾಯ 37,278.60 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 26.4.1995 ರಂದು ಹೊರಡಿಸಲಾದ ಆರ್‌ಡಿ 54 ಟಿಆರ್‌ಎಂ 95ನೇ ಕ್ರಮಾಂಕದ ಅಧಿಸೂಚನೆ.

18) ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ 29 ಗ್ರಾಮಗಳ 1991-92ನೇ ಸಾಲಿನ ಭೂ ಕಂದಾಯ 68,115.77 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 26.4.1995 ರಂದು ಹೊರಡಿಸಲಾದ ಆರ್‌ಡಿ 47 ಟಿಆರ್‌ಎಂ 95ನೇ ಕ್ರಮಾಂಕದ ಅಧಿಸೂಚನೆ.

19) ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನ 15 ಗ್ರಾಮಗಳ 1993-94ನೇ ಸಾಲಿನ ಭೂ ಕಂದಾಯ 3,255.28 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 4.5.1995 ರಂದು ಹೊರಡಿಸಲಾದ ಆರ್‌ಡಿ 237 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ.

20) ವಿಜಾಪುರ ಜಿಲ್ಲೆಯ ವಿಜಾಪುರ ತಾಲ್ಲೂಕಿನ 47 ಗ್ರಾಮಗಳ 1990-91ನೇ ಸಾಲಿನ ಭೂ ಕಂದಾಯ 53,810.56' ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 5.5.1995 ರಂದು ಹೊರಡಿಸಲಾದ ಆರ್‌ಡಿ 82 ಟಿಆರ್‌ಎಂ 95ನೇ ಕ್ರಮಾಂಕದ ಅಧಿಸೂಚನೆ.

21) ಬೆಳಗಾವಿ ಜಿಲ್ಲೆಯ ಸವಗತ್ತಿ ತಾಲ್ಲೂಕಿನ 34 ಗ್ರಾಮಗಳ 1990-91ನೇ ಸಾಲಿನ ಭೂ ಕಂದಾಯ 95,206.10 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 5.51995 ರಂದು ಹೊರಡಿಸಲಾದ ಆರ್‌ಡಿ 53 ಟಿಆರ್‌ಎಂ 95 ನೇ ಕ್ರಮಾಂಕದ ಅಧಿಸೂಚನೆ.

22) ವಿಜಾಪುರ ಜಿಲ್ಲೆಯ ಬಾಗಲಕೋಟೆ ತಾಲ್ಲೂಕಿನ 54 ಗ್ರಾಮಗಳ 1990-91ನೇ ಸಾಲಿನ ಭೂ ಕಂದಾಯ 1,28,541.16 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 5.5.1995 ರಂದು ಹೊರಡಿಸಲಾದ ಆರ್‌ಡಿ 81 ಟಿಆರ್‌ಎಂ 95ನೇ ಕ್ರಮಾಂಕದ ಅಧಿಸೂಚನೆ.

23) ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ 11 ಗ್ರಾಮಗಳ 1990-91ನೇ ಸಾಲಿನ ಭೂ ಕಂದಾಯ 16,343.36 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 6.5.1995 ರಂದು ಹೊರಡಿಸಲಾದ ಆರ್‌ಡಿ 55 ಟಿಆರ್‌ಎಂ 95ನೇ ಕ್ರಮಾಂಕದ ಅಧಿಸೂಚನೆ.

24) ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ 68 ಗ್ರಾಮಗಳ 1990-91ನೇ ಸಾಲಿನ ಭೂ ಕಂದಾಯ 52,991.37 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 8.5.1995 ರಂದು ಹೊರಡಿಸಲಾದ ಆರ್‌ಡಿ 33 ಟಿಆರ್‌ಎಂ 95ನೇ ಕ್ರಮಾಂಕದ ಅಧಿಸೂಚನೆ.

25) ರಾಯಚೂರು ಜಿಲ್ಲೆಯ ಗಂಗಾವತಿ ತಾಲ್ಲೂಕಿನ 77 ಗ್ರಾಮಗಳ 1994-95ನೇ ಸಾಲಿನ ಭೂ ಕಂದಾಯ 33,853.24 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 9.5.1995 ರಂದು ಹೊರಡಿಸಲಾದ ಆರ್‌ಡಿ 96 ಟಿಆರ್‌ಎಂ 95ನೇ ಕ್ರಮಾಂಕದ ಅಧಿಸೂಚನೆ.

26) ರಾಯಚೂರು ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ 122 ಗ್ರಾಮಗಳ 1994-95ನೇ ಸಾಲಿನ ಭೂ ಕಂದಾಯ 2,26,251.46 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 10.5.1995ರಂದು ಹೊರಡಿಸಲಾದ ಆರ್‌ಡಿ 98 ಟಿಆರ್‌ಎಂ 95ನೇ ಕ್ರಮಾಂಕದ ಅಧಿಸೂಚನೆ.

27) ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನ 301 ಗ್ರಾಮಗಳ 1993-94 ನೇ ಸಾಲಿನ ಭೂ ಕಂದಾಯ 82,230.64 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 12.5.1995 ರಂದು ಹೊರಡಿಸಲಾದ ಆರ್‌ಡಿ 25 ಟಿಆರ್‌ಎಂ 95ನೇ ಕ್ರಮಾಂಕದ ಅಧಿಸೂಚನೆ.

28) ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ 14 ಗ್ರಾಮಗಳ 1994-95ನೇ ಸಾಲಿನ ಭೂ ಕಂದಾಯ 16,854.25ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 13.6.1995 ರಂದು ಹೊರಡಿಸಲಾದ ಆರ್‌ಡಿ 97 ಟಿಆರ್‌ಎಂ 95 ನೇ ಕ್ರಮಾಂಕದ ಅಧಿಸೂಚನೆ.

29) ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ 23 ಗ್ರಾಮಗಳ 1981-82ನೇ ಸಾಲಿನ ಭೂ ಕಂದಾಯ 51,223.60 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 13.6.1995 ರಂದು ಹೊರಡಿಸಲಾದ ಆರ್‌ಡಿ 64 ಟಿಆರ್‌ಎಂ 94ನೇ ಕ್ರಮಾಂಕದ ಅಧಿಸೂಚನೆ.

30) ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ 103 ಗ್ರಾಮಗಳ 1994-95ನೇ ಸಾಲಿನ ಭೂ ಕಂದಾಯ 1,10,086.26 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 7.7.1995 ರಂದು ಹೊರಡಿಸಲಾದ ಆರ್‌ಡಿ 115 ಟಿಆರ್‌ಎಂ 95ನೇ ಕ್ರಮಾಂಕದ ಅಧಿಸೂಚನೆ. 1957ನೇ ಇಸವಿಯ ಕರ್ನಾಟಕ ಮುದ್ರಾಂಕ ಅಧಿನಿಯಮದದ 9(2)ನೇ ಕಲಮಿನ ಮೇರೆಗೆ.

31) ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಮುತ್ತೂರು ಹೋಬಳಿ ಚಿಕ್ಕನೂರು ಗ್ರಾಮದ ಕುಪ್ಪಳ್ಳಿಯ ಶ್ರೀ ಕೆ.ಆರ್. ಶೇಷಪ್ಪ ಗೌಡ ಮತ್ತು ಮಕ್ಕಳು ಹಾಗೂ ಇದೇ ಗ್ರಾಮದ ಶ್ರೀ ಕೆ.ಪಿ. ಜಗದೇಶ್ ರಾಮಚಂದ್ರ ಮೂರ್ತಿ ಮತ್ತು ಅವರ ಮಗ ಶ್ರೀ ಕೆ.ಜಿ. ಸುಭೋದ ಅವರುಗಳು ಸರ್ವೆ ನಂ.2ರಲ್ಲಿರುವ ಖಾಲಿ ಜಾಗ ಮತ್ತು ಮನೆ ಇವುಗಳನ್ನು ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ (ರಿ) ರವರಿಗೆ ಬರೆದುಕೊಡುವ ದಸ್ತಾವೇಜುಗಳಿಗೆ ಮುದ್ರಾಂಕ ಶುಲ್ಕದಿಂದ ವಿನಾಯಿತಿ ನೀಡಿರುವ ಸಂಬಂಧದಲ್ಲಿ ದಿನಾಂಕ 15.4.1995 ರಂದು ಹೊರಡಿಸಲಾದ ಆರ್‌ಡಿ 24 ಮುನೋಮು 95ನೇ ಕ್ರಮಾಂಕ ಆದೇಶ.

32) ಗುಲ್ಬರ್ಗಾ ಜಿಲ್ಲೆಯ ಅಫ್‌ಜಲ್‌ಪುರ ತಾಲ್ಲೂಕಿನ ಸಾಕೀನ ದೇವಲಗಾಣಗಾಪುರದ ಶ್ರೀ ಗೋವಿಂದ ಭಟ್ಟ, ತಂದೆ ಗುರುಭಟ್ಟ ಪೂಜಾರಿ ಇವರು ಇದೇ ಗ್ರಾಮದ ಸರ್ವೆ ನಂ.73 ರಲ್ಲಿ ಎರಡು ಎಕರೆ ಜಮೀನನ್ನು ಶ್ರೀ ದತ್ತ ಬಾಲ ಸೇವಾಶ್ರಮ ಸಂಸ್ಥೆಗೆ ದಾನವಾಗಿ ನೀಡಲು ಬರೆದುಕೊಡುವ ಪತ್ರಕ್ಕೆ ಮುದ್ರಾಂಕ ಶುಲ್ಕದಿಂದ ವಿನಾಯಿತಿ ನೀಡುವ ಸಂಬಂಧದಲ್ಲಿ ದಿನಾಂಕ 28.3.1995 ರಂದು ಹೊರಡಿಸಲಾದ ಆರ್‌ಡಿ 227 ಇಎಸ್‌ಆರ್ 93 ನೇ ಕ್ರಮಾಂಕದ ಆದೇಶ.

33) ಹುಬ್ಬಳ್ಳಿಯ ಅಂಜುಮಾನ್ ಇಸ್ಲಾಮ ಸಂಸ್ಥೆಯು ವಾಣಿಜ್ಯ ಸಂಕೀರ್ಣದ 3ನೇ ಹಂತವನ್ನು ನಿರ್ಮಿಸಲು ಸಾಲದ ರೂಪದಲ್ಲಿ ಐವತ್ತು ಲಕ್ಷ ರೂ.ಗಳನ್ನು ಪಡೆಯುವ ಸಂಬಂಧ ಮಾರ್ಟಗೇಜ್ ಪತ್ರವನ್ನು ನೋಂದಾಯಿಸುವ ಬಗ್ಗೆ ಬರೆದುಕೊಡುವ ದಸ್ತಾ ವೇಜುಗಳಿಗೆ ಮುದ್ರಾಂಕ ಶುಲ್ಕದಿಂದ ವಿನಾಯಿತಿ ನೀಡುವ

ಸಂಬಂಧದಲ್ಲಿ ದಿನಾಂಕ 13.6.1995 ರಂದು ಹೊರಡಿಸಲಾದ ಆರ್‌ಡಿ 236 ಮುನೋಮು 95ನೇ ಕ್ರಮಾಂಕದ ಆದೇಶಗಳನ್ನು ಮಂಡಿಸುತ್ತೇನೆ.

IV. ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿ)

(ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಮಂತ್ರಿ) ಅವರ ಪರವಾಗಿ) ಮಾನ್ಯ ಅಧ್ಯಕ್ಷರೆ, 1976ರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮದ 42(3) ನೇ ಕಲಮಿನ ಮೇರೆಗೆ.

1) 1990-91ನೇ ಸಾಲಿನ ಗುಲ್ಬರ್ಗಾ ವಿಶ್ವವಿದ್ಯಾಲಯದ ಲೆಕ್ಕಪರಿಶೋಧನಾ ವರದಿ.

2) 1992-93ನೇ ಸಾಲಿನ ಕರ್ನಾಟಕ ವಿಶ್ವವಿದ್ಯಾಲಯದ ಲೆಕ್ಕಪರಿಶೋಧನಾ ವರದಿ.

1976ರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮಗಳ 45 (2) ನೇ ಕಲಮಿನ ಮೇರೆಗೆ.

3) 1992-93ನೇ ಸಾಲನ ಗುಲ್ಬರ್ಗಾ ವಿಶ್ವವಿದ್ಯಾಲಯದ ವಾರ್ಷಿಕ ವರದಿ.

4) 1991-92ನೇ ಸಾಲಿನ ಬೆಂಗಳೂರು ವಿಶ್ವವಿದ್ಯಾಲಯದ ವಾರ್ಷಿಕ ವರದಿ.

5) 1992-93ನೇ ಸಾಲಿನ ಕರ್ನಾಟಕ ವಿಶ್ವವಿದ್ಯಾಲಯದ ವಾರ್ಷಿಕ ವರದಿಯನ್ನು ಮಂಡಿಸುವುದು.

V. ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಜ್ ಮಂತ್ರಿ) ಅವರು : ಭಾರತದ ಸಂವಿಧಾನದ 213 (2) (ಎ) ಅನುಚ್ಛೇದದ ಮೇರೆಗೆ.

1) 1995ನೇ ಇಸವಿ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) (ತಿದ್ದು ಪಡಿ) (ಸಂಖ್ಯೆ 4) ಅಧ್ಯಾದೇಶಕ್ಕೆ ಸಂಬಂಧಿಸಿದಂತೆ ದಿನಾಂಕ 5.6.95 ರಂದು ಹೊರಡಿಸಲಾದ ಲಾ 25 ಎಲ್‌ಜಿಎನ್ 95ರ ಅಧಿಸೂಚನೆ.

1993ರ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮದ 311ನೇ ಕಲಮಿನ ಮೇರೆಗೆ.

2) ಕರ್ನಾಟಕ ಪಂಚಾಯತ್‌ರಾಜ್ (ತಾಲ್ಲೂಕು ಪಂಚಾಯತಿಗಳ ಮತ್ತು ಜಿಲ್ಲಾ ಪಂಚಾಯಿತಿಗಳ ಸದಸ್ಯರ ಉಪದೇಶನ ಶುಲ್ಕ ಮತ್ತು ಇತರೇ ಭತ್ಯೆಗಳು) ನಿಯಮ 1994ರ ಬಗ್ಗೆ ದಿನಾಂಕ 6.5.1995 ರಂದು ಹೊರಡಿಸಲಾದ ಗ್ರಾಅಪ 906 ಜಿಪಸ 94ರ ಅಧಿಸೂಚನೆ,

3) ಕರ್ನಾಟಕ ಪಂಚಾಯತ್‌ರಾಜ್ (ಚುನಾವಣೆಗಳನ್ನು ನಡೆಸುವಿಕೆ)(ತಿದ್ದುಪಡಿ) ನಿಯಮಗಳು 1995ರ ಬಗ್ಗೆ ದಿನಾಂಕ 20.2.1995 ರಂದು ಹೊರಡಿಸಲಾದ ಗ್ರಾಅಪ 200 ಜಿಪಸ 94ರ ಅಧಿಸೂಚನೆ. 1993ರ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮದ 262(3)ನೇ ಕಲಮಿನ ಮೇರೆಗೆ.

4) 1992-93ಮೇ ಸಾಲಿನ ಮೈಸೂರು ಜಿಲ್ಲಾ ಪರಿಷತ್ತಿನ ಲೆಕ್ಕ ಪರಿಶೋಧನಾ ವರದಿ ಹಾಗೂ ವಾರ್ಷಿಕ ಲೆಕ್ಕ ಪತ್ರಗಳು.

5) 1992-93ನೇ ಸಾಲಿನ ಬೆಂಗಳೂರು (ಗ್ರಾಮಾಂತರ) ಜಿಲ್ಲಾ ಪಂಚಾಯತ್‌ನ ವಾರ್ಷಿಕ ಲೆಕ್ಕಗಳ ಮತುತ ಲೆಕ್ಕಪರಿಶೋಧನಾ ವರದಿ.

6) 1991-92ನೇ ಸಾಲಿನ ಚಿಕ್ಕಮಗಳೂರು ಜಿಲ್ಲಾ ಪರಿಷತ್ತು ವಾರ್ಷಿಕ ಲೆಕ್ಕ ಪತ್ರಗಳು.

7) 1992-93ನೇ ಸಾಲಿನ ಚಿಕ್ಕಮಗಳೂರು ಜಿಲ್ಲಾ ಪಂಚಾಯತ್‌ನ ವಾರ್ಷಿಕ ಲೆಕ್ಕಪತ್ರಗಳು ಹಾಗೂ ಲೆಕ್ಕ ಪರಿಶೋಧನಾ ವರದಿ.

8) 1991-92ನೇ ಸಾಲಿನ ಬೀದರ್ ಜಿಲ್ಲಾ ಪರಿಷತ್ತು ವಾರ್ಷಿಕ ಲೆಕ್ಕಪತ್ರಗಳು ಹಾಗೂ ಲೆಕ್ಕಪರಿಶೋಧನಾ ವರದಿ.

9) 1992-93ನೇ ಸಾಲಿನ ಶಿವಮೊಗ್ಗ ಜಿಲ್ಲಾ ಪರಿಷತ್ತಿನ ವಾರ್ಷಿಕ ಲೆಕ್ಕಗಳು ಮತ್ತು ಲೆಕ್ಕಪರಿಶೋಧನಾ ವರದಿ.

10) 1991-92 ಹಾಗೂ 1992-93ನೇ ಸಾಲಿನ ಹಾಸನ ಜಿಲ್ಲಾ ಪರಿಷತ್ತಿನ ಲೆಕ್ಕ ಪರಿಶೋಧನಾ ವರದಿಗಳು,

11) 1992-93ನೇ ಸಾಲಿನ ಧಾರವಾಡ ಜಿಲ್ಲಾ ಪರಿಷತ್ತಿನ ಲೆಕ್ಕಪತ್ರಗಳು ಹಾಗೂ ಲೆಕ್ಕ ಪರಿಶೋಧನಾ ವರದಿ,

12) 1992-93ನೇ ಸಾಲಿನ ರಾಯಚೂರು ಜಿಲ್ಲಾ ಪರಿಷತ್ತಿನ ವಾರ್ಷಿಕ ಲೆಕ್ಕಪತ್ರಗಳು ಹಾಗೂ ಲೆಕ್ಕಪರಿಶೋಧನಾ ವರದಿ.

13) 1992-93ನೇ ಸಾಲಿನ ಬೀದರ್ ಜಿಲ್ಲಾ ಪರಿಷತ್ತಿನ ವಾರ್ಷಿಕ ಲೆಕ್ಕ ಪತ್ರಗಳು ಹಾಗೂ ಲೆಕ್ಕಪರಿಶೋಧನಾ ವರದಿ.

1993ರ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮದ 300(5)ನೇ ಕಲಮಿನ ಮೇರೆಗೆ.

14) 1993-94ನೇ ಸಾಲಿನ ಶಿವಮೊಗ್ಗ ಜಿಲ್ಲಾ ಪಂಚಾಯತ್‌ರಾಜ್ ವಾರ್ಷಿಕ ಆಡಳಿತ ವರದಿ (ಜ್ಞಾಪನಾಪತ್ರದೊಂದಿಗೆ).

15) 1993-94ನೇ ಸಾಲಿನ ಬೆಳಗಾವಿ ಜಿಲ್ಲಾ ಪಂಚಾಯತ್ ಆಡಳಿತ ವರದಿ(ಜ್ಞಾಪನಾ ಪತ್ರದೊಂದಿಗೆ).

16) 1993-94ನೇ ಸಾಲಿನ ಮಂಡ್ಯ ಜಿಲ್ಲಾ ಪಂಚಾಯತ್‌ನ ವಾರ್ಷಿಕ ಆಡಳಿತ ವರದಿ (ಜ್ಞಾಪನಾಪತ್ರದೊಂದಿಗೆ)

17) 1993-94ನೇ ಸಾಲಿನ ತುಮಕೂರು ಜಿಲ್ಲಾ ಪಂಚಾಯತ್‌ನ ವಾರ್ಷಿಕ ಆಡಳಿತ ವರದಿ (ಜ್ಞಾಪನಾಪತ್ರದೊಂದಿಗೆ)ಗಳನ್ನು ಮಂಡಿಸುತ್ತೇನೆ.

VI. ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿ)

(ಶ್ರೀ ಸಿದ್ಧರಾಮಯ್ಯ (ಹಣಕಾಸು ಹಾಗೂ ಯೋಜನಾ ಮಂತ್ರಿ)ಪರವಾಗಿ) ಮಾನ್ಯ ಅಧ್ಯಕ್ಷರೇ, 1957ರ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮಿದ 39ನೇ ಕಲಮಿನ ಮೇರೆಗೆ

1) ಕರ್ನಾಟಕದಲ್ಲಿ ಹೊಸದಾಗಿ ಸ್ಥಾಪಿಸಲಾಗುವ 125 ಎಂಟಿಸಿಎ ಸಾಮರ್ಥ್ಯಕ್ಕಿಂತ ಕಡಿಮೆ ಸಾಮರ್ಥ್ಯದ 'ಏಕೀಕೃತ ಉಕ್ಕು ಸ್ಥಾವರಕ್ಕೆ' ಅದು ಉತ್ಪಾದಿಸುವ ಕಬ್ಬಿಣ ಮತ್ತು ಉಕ್ಕು ಹಾಗೂ ಅದು ತಯಾರಿಸುವ ಸಿದ್ಧವಸ್ತುಗಳ, ಅನುಪಯುಕ್ತ ಪದಾರ್ಥಗಳ ಹಾಗೂ ಪೂರಕ ಪದರ್ಥಗ ಮಾರಾಟಕ್ಕೆ ಸಂಬಂಧಿಸಿದಂತೆ 14 ವರ್ಷಗಳ ಕಾಲ ತೆರಿಗೆ ವಿನಾಯ್ತಿ ನೀಡಿ ದಿನಾಂಕ 14.2.19 ರಂದು ಹೊರಡಿಸಲಾದ ಎಫ್‌ಡಿ 165 ಸಿಎಸ್‌ಎಲ್ 94 (1)ನೇ ಕ್ರಮಾಂಕದ ಅಧಿಸೂಚನೆ.

2) ಯಾವುದೇ ಕೈಗಾರಿಕಾ ಘಟಕ ತಯಾರಿಸಿ ಅಂತಹ ರಾಜ್ಯ ವ್ಯಾಪಾರ ಅಥವಾ ವಾಣಿಜ್ಯ ಕ್ರಮದಲ್ಲಿ ಮಾರಾಟ ಮಾಡುವ ವಸ್ತುಗಳಿಗೆ ತೆರಿಗೆ ವಿನಾಯಿತಿ ನೀಡಿ ದಿನಾಂಕ 14.2.95 ರಂದು ಹೊರಡಿಸಲಾದ ಎಫ್‌ಡಿ 165 ಸಿಎಸ್‌ಎಲ್ 94(2)ನೇ ಕ್ರಮಾಂಕದ ಅಧಿಸೂಚನೆ.

3) ಕಬ್ಬಿಣ ಮತ್ತು ಉಕ್ಕು ತಯಾರಿಸಲು ವಾರ್ಷಿಕ, 1.25 ಮಿಲಿಯನ್‌ಟನ್ ಸಾಮರ್ಥ್ಯಕ್ಕೆ ಕಡಿಮೆಯಿಲ್ಲದ ಹೊಸ ಏಕೀಕೃತ ಉಕ್ಕು ಸ್ಥಾವರಕ್ಕೆ ಪತ್ರಿ ಎಕ

ಖರೀದಿ ಬೆಲೆ ಪಟ್ಟಿಗನುಗುಣವಾಗಿ ಒಂದು ಕೋಟಿ ರೂ.ಗಳ ಮೌಲ್ಯಕ್ಕಿಂತ ಹೆಚ್ಚಿನ ಬೆಲೆಯ ಯಂತ್ರೋಪಕರಣ : ಸಾಮಗ್ರಿಗಳನ್ನು ಮಾರಾಟ ಮಾಡುವ ಕರ್ನಾಟಕದಲ್ಲಿ ನೋಂದಾಯಿತರಾಗಿರುವ ವ್ಯಾಪಾರಿಗಳಿಗೆ 14 ವರ್ಷಗಳ ಕಾಲ ತೆರಿಗೆ ವಿನಾಯಿತಿ ನೀಡಿ ದಿನಾಂಕ 14.2.95 ರಂದು ಹೊರಡಿಸಲಾದ ಎಫ್‌ಡಿ 165 ಸಿಎಸ್‌ಎಲ್ 94(3)ನೇ ಕ್ರಮಾಂಕದ ಅಧಿಸೂಚನೆ.

4) ಕರ್ನಾಟಕ ಸ್ಥಾಪನೆಗೊಂಡಿರುವ ವಾರ್ಷಿಕ 1.25 ಮಿಲಿಯನ್ ಟನ್ ಸಾಮರ್ಥ್ಯಕ್ಕೆ ಕಡಿಮೆಯಿಲ್ಲದ ಹೊಸ ಎಕೀಕೃತ ಉಕ್ಕು ಸ್ಥಾವರ, ಅಂತಹ ವಸ್ತುಗಳ ತಯಾರಿಕೆಗಾಗಿ, ಸ್ಥಳೀಯ ಪ್ರದೇಶಗಳಿಗೆ ಸಾಗಿರುವ ಪತ್ರಿ ಎಕ ಖರೀದಿ ಬೆಲೆ ಪಟ್ಟಿಗನುಗುಣವಾಗಿ ಒಂದು ಕೋಟಿ ರೂ.ಗಳ ಮೌಲ್ಯಕ್ಕಿಂತ ಹೆಚ್ಚಿನ ಬೆಲೆಯ ಯಂತ್ರೋಪಕರಣ : ಸಾಮಗ್ರಿಗಳಿಗೆ 14 ವರ್ಷಗಳ ಕಾಲ ಪ್ರದೇಶ ತೆರಿಗೆ ವಿನಾಯಿತಿ ನೀಡಿ, ದಿನಾಂಕ 14.2.95 ರಂದು ಹೊರಡಿಸಲಾದ ಎಫ್‌ಡಿ 165 ಸಿಎಸ್‌ಎಲ್ 94(4)ನೇ ಕ್ರಮಾಂಕದ ಅಧಿಸೂಚನೆ.

5) 1994ನೇ ಇಸವಿಯ ಕರ್ನಾಟಕ ಸರಕು ಪ್ರದೇಶ ಮೇಲಣ ತೆರಿಗೆ ಅಧಿನಿಯಮದ (1994ನೇ ಇಸವಿಯ ಕರ್ನಾಟಕ ಅಧಿನಿಯಮ 45) 1ನೇ ಕಲಮಿನ (2) ನೇ ಉಪ ಕಲಮಿನ ಮೇರೆಗೆ ಕರ್ನಾಟಕ ಸರ್ಕಾರ 1995ನೇ ಇಸವಿಯ ಏಪ್ರಿಲ್ ಮೊದಲನೆಯ ದಿನವನ್ನು ನಿಗದಿಗೊಳಿಸಿ ಅಂದಿನಿಂದ ಸದರಿ ಅಧಿನಿಯಮದ ಎಲ್ಲಾ ಉಪಬಂಧಗಳು ಜಾರಿಗೆ ಬರತಕ್ಕದ್ದೆಂದು ದಿನಾಂಕ 31.3.95 ರಂದು ಹೊರಡಿಸಿದ ಎಫ್‌ಡಿ 43 ಸಿಇಟಿ 95(1)ನೇ ಕ್ರಮಾಂಕದ ಅಧಿಸೂಚನೆ. 1979ನೇ ಇಸವಿಯ ಕರ್ನಾಟಕ ಸರಕು ಪ್ರವೇಶ ಮೇಲಣ ತೆರಿಗೆ ಅಧಿನಿಯಮದ (1979ನೇ ಇಸವಿಯ ಕರ್ನಾಟಕ ಅಧಿನಿಯಮ 27) 4ಸಿ ಕಲಮಿನ ಮೇರೆಗೆ.

6) 1957ನೇ ಇಸವಿಯ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ ಮೇರೆಗೆ ನೇಮಕಗೊಂಡ ವಾಣಿಜ್ಯ ತೆರಿಗೆ ಅಧಿಕಾರಿ ತನ್ನ ವ್ಯಾಪ್ತಿಯೊಳಗೆ ಬರುವ 1988ನೇ ಇಸವಿಯ ಮೋಟಾರು ವಾಹನಗಳ ಅಧಿನಿಯಮದ ಮೇರೆಗೆ ನೋಂದಾವಣೆಯಾಗಿರುವ ವಾಹನಗಳ ಮೇಲೆ ಸದರಿ ಉಪಬಂಧದ ಅನುಷ್ಠಾನಕ್ಕೆ ಅಧಿಕಾರಿಯಾಗಿರಬೇಕೆಂದು ಆಯುಕ್ತರು ಸೂಚಿಸಿ ದಿನಾಂಕ 31.3.95 ರಂದು ಹೊರಡಿಸಿದ ಎಫ್‌ಡಿ 43 ಸಿಇಟಿ 95(2)ನೇ ಕ್ರಮಾಂಕದ ಅಧಿಸೂಚನೆ.

7) 1979ನೇ ಇಸವಿಯ ಕರ್ನಾಟಕ ಸರಕು ಪ್ರವೇಶ ಮೇಲಣ ಅಧಿನಿಯಮದ (1979ನೇ ಇಸವಿಯ ಕರ್ನಾಟಕ ಅಧಿನಿಯಮ 27)4ಬಿ ಕಲಮಿನ (2)ನೇ ಉಪ ಕಲಮಿನ ಮೇರೆಗೆ ಕರ್ನಾಟಕ ಸರ್ಕಾರ ಸದರಿ ಅಧಿನಿಯಮದಡಿಯಲ್ಲಿ ಮೋಟಾರು ವಾಹನಗಳ ಪ್ರವೇಶಕ್ಕೆ ನಿಗದಿಪಡಿಸಿದ ದರಗಳನ್ನು 1995ನೇ ಇಸವಿಯ ಏಪ್ರಿಲ್ ಒಂದನೇ ದಿನಾಂಕದಿಂದ ಜಾರಿಗೆಬರುವಂತೆ ವಿಧಿಸಿ ವಸೂಲು ಮಾಡತಕ್ಕದ್ದೆಂದು ನಿಗದಿಗೊಳಿಸಿ, ದಿನಾಂಕ 31.3.95ರಂದು ಹೊರಡಿಸಿದ ಎಫ್‌ಡಿ 43 ಸಿಇಟಿ 95(3)ನೇ ಕ್ರಮಾಂಕದ ಅಧಿಸೂಚನೆ.

8) 1989ನೇ ಇಸವಿಯ ಕರ್ನಾಟಕ ಸಾಮಾನ್ಯ ನಿಯಮಗಳ (ಕರ್ನಾಟಕ ಅಧಿನಿಯಮ 3 1989)21ನೇ ಕಲಮನ್ನು ಓದಿಕೊಂಡಂತೆ 1979ನೇ ಇಸವಿಯ ಕರ್ನಾಟಕ ಸರಕು ಪ್ರವೇಶ ಮೇಲಣ ತೆರಿಗೆ ಅಧಿನಿಯಮದ (ಕರ್ನಾಟಕ ಅಧಿನಿಯಮ 27,1979)3ನೇ ಕಲಮಿನ (1)ನೇ ಉಪ ಕಲಮಿನ ಮೇರೆಗೆ ಕರ್ನಾಟಕ ಸರ್ಕಾರ ದಿನಾಂಕ 30.3.94ರ ಎಫ್‌ಡಿ 112ಸಿಇಟಿ 93(3)ನೇ ಕ್ರಮಾಂಕದ ಅಧಿಸೂಚನೆಯನ್ನು ತಿದ್ದುಪಡಿ ಮಾಡಿ ದಿನಾಂಕ 31.3.95 ರಂದು ಹೊರಡಿಸಿದ ಎಫ್‌ಡಿ 43 ಸಿಇಟಿ 95(4)ನೇ ಕ್ರಮಾಂಕದ ಅಧಿಸೂಚನೆ.

9) 1989ನೇ ಇಸವಿಯ ಕರ್ನಾಟಕ ಸಾಮಾನ್ಯತ ನಿಯಮಗಳ ಅಧಿನಿಯಮದ (ಕರ್ನಾಟಕ ಅಧಿನಿಯಮ 3,1989) 21ನೇ ಕಲಮನ್ನು ಓದಿಕೊಂಡಂತೆ, 1979ನೇ ಇಸವಿಯ ಕರ್ನಾಟಕ ಸರಕು ಪ್ರವೇಶ ಮೇಲಣ ತೆರಿಗೆ ಅಧಿನಿಯಮದ (ಕರ್ನಾಟಕ ಅಧಿನಿಯಮ 27,1979)11-ಎ ಕಲಮಿನ ಮೇರೆಗೆ ಕರ್ನಾಟಕ ಸರ್ಕಾರ ದಿನಾಂಕ 1.4.95 ರಿಂದ ಜಾರಿಗೆ ಬರುವಂತೆ 30.3.94ರ ಎಫ್‌ಡಿ 112 ಸಿಇಟಿ 93(5)ನೇ ಕ್ರಮಾಂಕದ ಅಧಿಸೂಚನೆಯನ್ನು ರದ್ದು ಗೊಳಿಸಿ ದಿನಾಂಕ 31.3.95 ರಂದು ಹೊರಡಿಸಿದ ಎಫ್‌ಡಿ 43 ಸಿಇಟಿ 95(5)ನೇ ಕ್ರಮಾಂಕದ ಅಧಿಸೂಚನೆ.

10) 1957ನೇ ಇಸವಿಯ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ (ಕರ್ನಾಟಕ ಅಧಿನಿಯಮ 25,1957) 8ಎ ಕಲಮಿನಿಯಲ್ಲಿ ಕರ್ನಾಟಕ ಸರ್ಕಾರ. ಮೋಟಾರು ವಾಹನಗಳ ಅಡಿಕಟ್ಟು ಟ್ರಾಕ್ಟರ್‌ಗಳು, ಆರ್ತಮೂವರ್ಸ್, ಟ್ರಕ್, ಬಸ್ ಮತ್ತು ಬದಿ ಕವಚವಿರುವ ಅಡಿಕಟ್ಟುಗಳು ಸೇರಿದಂತೆ ಮೋಟಾರು ವಾಹನಗಳು ಮಾರಾಟ ವ್ಯಾಪಾರಿಗೆ, 1979ನೇ ಇಸವಿಯ ಕರ್ನಾಟಕ ಸರಕು ಪ್ರವೇಶ ಮೇಲಣ ತೆರಿಗೆ ಅಧಿನಿಯಮದ (1979ರ ಕರ್ನಾಟಕ ಅಧಿನಿಯಮ 27) 4ಬಿ ಕಲಮಿನಡಿಯಲ್ಲಿ ಪಾವತಿ ಮಾಡುವ ಪ್ರವೇಶ ತೆರಿಗೆಯ ಮೊತ್ತಕ್ಕೆ ಸಮನಾಗಿ ಪಾವತಿ ಮಾಡುವ ತೆರಿಗೆಯನ್ನು ದಿನಾಂಕ 11.4.95ರಿಂದ ಜಾರಿಗೆ ಬರುವಂತೆ. ಕಡಿಮೆ ಗೊಳಿಸಿ ದಿನಾಂಕ 31.3.95 ರಂದು ಹೊರಡಿಸಿದ ಎಫ್‌ಡಿ 43 ಸಿಇಟಿ 95(6)ನೇ ಕ್ರಮಾಂಕದ ಅಧಿಸೂಚನೆ.

11) 1979ರ ಕರ್ನಾಟಕ ಸರಕುಗಳ ಪ್ರವೇಶದ ಮೇಲಿನ ತೆರಿಗೆ ಅಧಿನಿಯಮ (1979ರ ಕರ್ನಾಟಕ ಅಧಿನಿಯಮ 27)ದ 11-ಎ ಪ್ರಕರಣದ ಮೇರೆಗೆ ಕರ್ನಾಟಕ ಸರ್ಕಾರವು ತೆರಿಗೆಯನ್ನು ವಿನಾಯಿತಿ ಮಾಡುವುದು ಸಾರ್ವಜನಿಕ ದೃಷ್ಟಿಯಿಂದ ಅವಶ್ಯಕವಾಗಿದೆ ಎಂಬುದಾಗಿ ಅಭಿಪ್ರಾಯ ಪಟ್ಟಿರುವುದರಿಂದ, ಕರ್ನಾಟಕ ರಾಜ್ಯದೊಳಗೆ ವ್ಯಾಪಾರಿಯು ತಾನು ಹೊಂದಿರುವ ಘಟಕದಲ್ಲಿ ಪವರ್ ಟಿಲ್ಲರ್‌ಗಳ ತಯಾರಿಕೆಯಲ್ಲಿ ಅವನು ಉಪಯೋಗಿಸಲು ರಾಜ್ಯದ ಹೊರಗಡೆ ಯಾವುದೇ ಸ್ಥಳದಿಂದ ಸ್ಥಳೀಯ ಪ್ರದೇಶದೊಳಕ್ಕೆ ಕಚ್ಚಾ ಸಾಮಾಗ್ರಿ, ಘಟಕ ಭಾಗಗಳು ಮತ್ತು ಬಳಸಿದ ವಸ್ತುಗಳು (ಇನ್‌ಪುಟ್ಸ್) ಮತ್ತು ಅದರ ಭಾಗಗಳು. ಇವುಗಳ ಪ್ರವೇಶದ ಮೇಲೆ ವ್ಯಾಪಾರಿಯು ಸಂದಾಯ ಮಾಡಬೇಕಾದ ತೆರಿಗೆಯನ್ನು 1995ರ ಏಪ್ರಿಲ್ ಒಂದನೆಯ ದಿನಾಂಕದಿಂದ ಪರಿಣಮಿಸುವಂತೆ ಈ ಮೂಲಕ ವಿನಾಯಿತಿ ನೀಡಿದ ಬಗ್ಗೆ ದಿನಾಂಕ 31-3-1995ರಂದು ಹೊರಡಿಸಲಾದ ಎಫ್‌ಡಿ 50 ಸಿಇಎಪ್ 95(1)ನೇ ಕ್ರಮಾಂಕದ ಅಧಿಸೂಚನೆ.

12) 1979ರ ಕರ್ನಾಟಕ ಸರಕುಗಳ ಪ್ರವೇಶದ ಮೇಲಿನ ತೆರಿಗೆ ಅಧಿನಿಯಮ (1979ರ ಕರ್ನಾಟಕ ಅಧಿನಿಯಮ 27)ದ 11-ಎ ಪ್ರಕರಣದ ಮೇರೆಗೆ ಕರ್ನಾಟಕ ಸರ್ಕಾರವು, ತೆರಿಗೆಯನ್ನು ವಿನಾಯಿತಿ ಮಾಡುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅವಶ್ಯಕವಾಗಿದೆ ಎಂಬುದಾಗಿ ಅಭಿಪ್ರಾಯ ಪಟ್ಟಿರುವುದರಿಂದ ಸ್ಥಳೀಯ ಪ್ರದೇಶಕ್ಕೆ ಬಳಕೆ ಉಪಯೋಗ ಅಥವಾ ಮಾರಾಟಕ್ಕಾಗಿ ಕರವಸ್ತುಗಳ ಪ್ರವೇಶದ ಮೇಲೆ ವ್ಯಾಪಾರಿಯು ಸಂದಾಯ ಮಾಡಬೇಕಾದ ತೆರಿಗೆಯನ್ನು 1995ನೇ ಏಪ್ರಿಲ್ ಒಂದನೆಯ ದಿನಾಂಕದಿಂದ ಪರಿಣಮಿಸುವಂತೆ ಈ ಮೂಲಕ ವಿನಾಯಿತಿಗೊಳಿಸಿರುವ ಸಂಬಂಧದಲ್ಲಿ ದಿನಾಂಕ 31-3-1995ರಂದು ಹೊರಡಿಸಲಾದ ಎಫ್‌ಡಿ 50 ಸಿಇಟಿ 95(2)ನೇ ಕ್ರಮಾಂಕದ ಅಧಿಸೂಚನೆ.

13) ಸರಕುಗಳ ತಯಾರಿಕೆಯಲ್ಲಿ ಕಚ್ಚಾ ಸಾಮಾಗ್ರಿ ಮತ್ತು ಘಟಕ ಭಾಗಗಳಾಗಿ ಉಪಯೋಗಿಸುವುದಕ್ಕಾಗಿ ಮತ್ತು ದೇಶದಿಂದ ಹೊರಗೆ ಅಂಥ ಸರಕುಗಳ ರಫ್ತಿಗಾಗಿ

ರಾಜ್ಯದ ಹೊರಗಡೆ ಯಾವುದೇ ಸ್ಥಳದಿಂದ ಸ್ಥಳೀಯ ಪ್ರದೇಶಕ್ಕೆ ಸರಕುಗಳ ಪ್ರವೇಶದ ಮೇಲೆ ಸಂದಾಯ ಮಾಡಬೇಕಾದ ತೆರಿಗೆಯನ್ನು 1995ನೇ ಏಪ್ರಿಲ್ ಒಂದನೆಯ ದಿನಾಂಕದಿಂದ ಪರಿಣಮಿಸಿವಂತೆ ಶೇಕಡ 100ರಷ್ಟು ತೆರಿಗೆ ವಿನಾಯಿತಿ ನೀಡುವ ಸಂಬಂದದಲ್ಲಿ ದಿನಾಂಕ 31-3-1995ರಂದು ಹೊರಡಿಸಲಾದ ಎಫ್‌ಡಿ 50 ಸಿಇಟಿ 95(3)ನೇ ಕ್ರಮಾಂಕದ ಅಧಿಸೂಚನೆ.

14) ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿಯಲ್ಲಿ ಸರಬರಾಜು ಮಾಡಿದ ಸರಕುಗಳ ಪ್ಯಾಕಿಂಗ್‌ನಲ್ಲಿ ಉಪಯೋಗಿಸುವುದಕ್ಕಾಗಿ ರಾಜ್ಯದ ಹೊರಗಡೆ ಯಾವುದೇ ಸ್ಥಳದಿಂದ ಸ್ಥಳೀಯ ಪ್ರದೇಶಕ್ಕೆ ಗೋಣಿಚೀಲಗಳ ಪ್ರವೇಶದ ಮೇಲೆ ವ್ಯಾಪಾರಿಯು ಸಂದಾಯ ಮಾಡಬೇಕಾದ ತೆರಿಗೆಯನ್ನು 1995ನೇ ಏಪ್ರಿಲ್ ಒಂದನೆಯ ದಿನಾಂಕದಿಂದ ಪರಿಣಮಿಸುವಂತೆ ತೆರಿಗೆ ವಿನಾಯಿತಿ ಸಂಬಂಧದಲ್ಲಿ ದಿನಾಂಕ 31.3.1995 ರಂದು ಹೊರಡಿಸಲಾದ ಎಫ್‌ಡಿ 50 ಸಿಇಟಿ 95(4)ನೇ ಕ್ರಮಾಂಕದ ಅಧಿಸೂಚನೆ.

15) 1995ನೇ ಏಪ್ರಿಲ್ ಒಂದನೆಯ ದಿನಾಂಕದಿಂದ ಪರಿಣಮಿಸುವಂತೆ 1994ನೇ ಮಾರ್ಚ್ 30ನೇ ದಿನಾಂಕದ ಸಂಖ್ಯೆ ಎಫ್‌ಡಿ 43 ಸಿಎಸ್‌ಎಲ್ 94(1)ರ ಅಧಿಸೂಚನೆಗೆ ತಿದ್ದುಪಡಿಯ ಸಂಬಂಧದಲ್ಲಿ ದಿನಾಂಕ 31.3.1995 ರಂದು ಹೊರಡಿಸಲಾದ ಎಫ್‌ಡಿ 49 ಸಿಎಸ್‌ಎಲ್ 95(1) ಕ್ರಮಾಂಕದ ಅಧಿಸೂಚನೆ.

16) 1995ನೇ ಏಪ್ರಿಲ್ ಒಂದನೇ ದಿನಾಂಕದಿಂದ ಪರಿಣಮಿಸುವಂತೆ 1993ರ ಮಾರ್ಚ್ 31ನೇ ದಿನಾಂಕದ ಸಂಖ್ಯೆ ಎಫ್‌ಡಿ 58 ಸಿಎಸ್‌ಎಲ್ 93(2)ರ ಅಧಿಸೂಚನೆಗೆ ತಿದ್ದುಪಡಿಯ ಸಂಬಂಧದಲ್ಲಿ ದಿನಾಂಕ 31.3.1995 ರಂದು ಹೊರಡಿಸಲಾದ ಎಫ್‌ಡಿ 49 ಸಿಎಸ್‌ಎಲ್ 95(2)ನೇ ಕ್ರಮಾಂಕದ ಅಧಿಸೂಚನೆ.

17) 1995ನೇ ಏಪ್ರಿಲ್ ಒಂದನೇ ದಿನಾಂಕದಿಂದ ಪರಿಣಾಮಿಸುವಂತೆ 1994ನೇ ಮಾರ್ಚ್ 30ನೆಯ ದಿನಾಂಕದ ಸಂಖ್ಯೆ ಎಫ್‌ಡಿ 43 ಸಿಎಸ್‌ಎಲ್ 94(2)ರ ಅಧಿಸೂಚನೆಗೆ ತಿದ್ದುಪಡಿಯ ಸಂಬಂಧದಲ್ಲಿ ದಿನಾಂಕ 31.3.1995 ರಂದು ಹೊರಡಿಸಲಾದ ಎಫ್‌ಡಿ 49 ಸಿಎಸ್‌ಎಲ್ 95(3)ನೇ ಕ್ರಮಾಂಕದ ಅಧಿಸೂಚನೆ.

18) 1995ನೇ ಏಪ್ರಿಲ್ ಒಂದನೇ ದಿನಾಂಕದಿಂದ ಪರಿಣಮಿಸುವಂತೆ 1994ನೇ ಮಾರ್ಚ್ 30 ನೆಯ ದಿನಾಂಕದ ಸಂಖ್ಯೆ ಎಫ್‌ಡಿ 43 ಸಿಎಸ್‌ಎಲ್ 94(3)ರ ಅಧಿಸೂಚನೆಗೆ ತಿದ್ದುಪಡಿಯ ಸಂಬಂಧದಲ್ಲಿ ದಿನಾಂಕ 31.3.1995 ರಂದು ಹೊರಡಿಸಲಾದ ಎಫ್‌ಡಿ 49 ಸಿಎಸ್‌ಎಲ್ 95(4)ನೇ ಕ್ರಮಾಂಕದ ಅಧಿಸೂಚನೆ.

19) 1995ನೇ ಏಪ್ರಿಲ್ ಒಂದನೇ ದಿನಾಂಕದಿಂದ ಪರಿಣಮಿಸುವಂತೆ 1994ನೇ ಮಾರ್ಚ್ 30ನೆಯ ದಿನಾಂಕದ ಸಂಖ್ಯೆ ಎಫ್‌ಡಿ 43 ಸಿಎಸ್‌ಎಲ್ 94(4)ರ ಅಧಿಸೂಚನೆಗೆ ತಿದ್ದುಪಡಿಯ ಸಂಬಂಧದಲ್ಲಿ ದಿನಾಂಕ 31.3.1995 ರಂದು ಹೊರಡಿಸಲಾದ ಎಫ್‌ಡಿ 49 ಸಿಎಸ್‌ಎಲ್ 95(5)ನೇ ಕ್ರಮಾಂಕದ ಅಧಿಸೂಚನೆ.

20) 1995ನೇ ಏಪ್ರಿಲ್ ಒಂದನೇ ದಿನಾಂಕದಿಂದ ಪರಿಣಮಿಸುವಂತೆ 1992ನೇ ಮಾರ್ಚ್ 30 ನೇ ದಿನಾಂಕದ ಸಂಖ್ಯೆ ಎಫ್‌ಡಿ 72 ಸಿಎಸ್‌ಎಲ್ 92(4)ರ ಅಧಿಸೂಚನೆಗೆ ತಿದ್ದುಪಡಿಯ ಸಂಬಂಧದಲ್ಲಿ ದಿನಾಂಕ 31.3.1995 ರಂದು ಹೊರಡಿಸಲಾದ ಎಫ್‌ಡಿ 49 ಸಿಎಸ್‌ಎಲ್ 95(6)ನೇ ಕ್ರಮಾಂಕದ ಅಧಿಸೂಚನೆ

21) 1995ನೇ ಏಪ್ರಿಲ್ ಒಂದನೇ ದಿನಾಂಕದಿಂದ ಪರಿಣಮಿಸುವಂತೆ 1994ನೇ ಮಾರ್ಚ್ 30ನೇ ದಿನಾಂಕದ ಸಂಖ್ಯೆ ಎಫ್‌ಡಿ 43 ಸಿಎಸ್‌ಎಲ್ 94(7)ರ ಅಧಿಸೂಚನೆಗೆ ತಿದ್ದುಪಡಿಯ ಸಂಬಂಧದಲ್ಲಿ ದಿನಾಂಕ 31.3.1995 ರಂದು ಹೊರಡಿಸಲಾದ ಎಫ್‌ಡಿ 49 ಸಿಎಸ್‌ಎಲ್ 95(7)ನೇ ಕ್ರಮಾಂಕದ ಅಧಿಸೂಚನೆ.

22) 1995ನೇ ಎಪ್ರಿಲ್ ಒಂದನೇ ದಿನಾಂಕದಿಂದ ಪರಿಣಮಿಸುವಂತೆ 1993ನೇ ಮಾರ್ಚ್ 31ನೇ ದಿನಾಂಕದ ಸಂಖ್ಯೆ ಎಫ್‌ಡಿ 58 ಸಿಎಸ್‌ಎಲ್ 93(12)ರ ಅಧಿಸೂಚನೆಗೆ ತಿದ್ದುಪಡಿಯ ಸಂಬಂಧದಲ್ಲಿ ದಿನಾಂಕ 31.3.1995 ರಂದು ಹೊರಡಿಸಲಾದ ಎಫ್‌ಡಿ 49 ಸಿಎಸ್‌ಎಲ್ 95(8)ನೇ ಕ್ರಮಾಂಕದ ಅಧಿಸೂಚನೆ.

23) 1995ನೇ ಏಪ್ರಿಲ್ ಒಂದನೇ ದಿನಾಂಕದಿಂದ ಪರಿಣಮಿಸುವಂತೆ ಈ ಕೆಳಕಂಡ ಅಧಿಸೂಚನೆಗಳನ್ನು ರದ್ದುಪಡಿಸಲು ದಿನಾಂಕ 31.3.1995 ರಂದು ಹೊರಡಿಸಲಾದ ಎಫ್‌ಡಿ 49 ಸಿಎಸ್‌ಎಲ್ 95(9)ನೇ ಕ್ರಮಾಂಕದ ಅಧಿಸೂಚನೆ.

1) ಎಫ್‌ಡಿ 190 ಸಿಎಸ್‌ಎಲ್ 93(1), ದಿನಾಂಕ 30.3.1994
2) ಎಫ್‌ಡಿ 43 ಸಿಎಸ್‌ಎಲ್ 94(12), ದಿನಾಂಕ 30.3.1994
3) ಎಫ್‌ಡಿ 150 ಸಿಎಸ್‌ಎಲ್ 92, ದಿನಾಂಕ 3.4.1992
4) ಎಫ್‌ಡಿ 101 ಸಿಎಸ್‌ಎಲ್ 90(6), ದಿನಾಂಕ 31.3.1990
5) ಎಫ್‌ಡಿ 182 ಸಿಎಸ್‌ಎಲ್ 92, ದಿನಾಂಕ 21.8.1992
6) ಎಫ್‌ಡಿ 93 ಸಿಎಸ್‌ಎಲ್ 92, ದಿನಾಂಕ 2.4.1992
7) ಎಫ್‌ಡಿ 53 ಸಿಎಸ್‌ಎಲ್ 94. ದಿನಾಂಕ 15.3.1994

24) 1995ನೇ ಏಪ್ರಿಲ್ ಒಂದನೇ ದಿನಾಂಕದಿಂದ ಪರಿಣಮಿಸುವಂತೆ ಈ ಕೆಳಗಿನ ಅಧಿಸೂಚನೆಗಳನ್ನು ರದ್ದು ಪಡಿಸುವುವ ಸಂಬಂಧದಲ್ಲಿ ದಿನಾಂಕ 31.3.1995 ರಂದು ಹೊರಡಿಸಲಾದ ಎಫ್‌ಡಿ 49 ಸಿಎಸ್‌ಎಲ್ 95(10)ರ ಕ್ರಮಾಂಕದ ಅಧಿಸೂಚನೆ :

1) ಅಧಿಸೂಚನೆ ಸಂಖ್ಯೆ ಎಫ್‌ಡಿ 78 ಸಿಎಸ್‌ಎಲ್ (21)91, ದಿನಾಂಕ 27.3.1991
2) ಅಧಿಸೂಚನೆ ಸಂಖ್ಯೆ ಎಫ್‌ಡಿ 132 ಸಿಎಸ್‌ಎಲ್ 91, ದಿನಾಂಕ 1.8.1991
3) ಅಧಿಸೂಚನೆ ಸಂಖ್ಯೆ ಎಫ್‌ಡಿ 229 ಸಿಎಸ್‌ಎಲ್ 89, ದಿನಾಂಕ 2.1.1990
4) ಅಧಿಸೂಚನೆ ಸಂಖ್ಯೆ ಎಫ್‌ಡಿ 78 ಸಿಎಸ್‌ಎಲ್ 91(23), ದಿನಾಂಕ 27.3.1991.

25) ಸರಕುಗಳ ಮಾರಾಟದ ಮೇಲೆ ವ್ಯಾಪಾರಿಯು ಸಂದಾಯ ಮಾಡಬೇಕಾದ ತೆರಿಗೆಯ ಕಡಿತದ ಸಂಬಂಧದಲ್ಲಿ ದಿನಾಂಕ 31.3.1995 ರಂದು ಹೊರಡಿಸಲಾದ ಎಫ್‌ಡಿ 49 ಸಿಎಸ್‌ಎಲ್ 95(11)ನೇ ಕ್ರಮಾಂಕದ ಅಧಿಸೂಚನೆ.

26) ಸಾರ್ವಜನಿಕ ವಿತರಣಾ ವ್ಯವಸ್ಥೆ ಮೂಲಕ ಪಡಿತರ ಚೀಟಿ ಹೊಂದಿರುವವರಿಗೆ ಸೀಮೆಎಣ್ಣೆಯ ಸರಬರಾಜಿಗಾಗಿ ಸೀಮೆಎಣ್ಣೆ ಮಾರಾಟದ ಮೇಲೆ ವ್ಯಾಪಾರಿಯು ಸಂದಾಯಮಾಡಬೇಕಾದ ತೆರಿಗೆಯನ್ನು ಶೇ. 4ಕ್ಕೆ ಇಳಿಸಿರುವುದರ ಬಗ್ಗೆ ದಿನಾಂಕ 31.3.1995 ರಂದು ಹೊರಡಿಸಲಾದ ಎಫ್‌ಡಿ 49 ಸಿಎಸ್‌ಎಲ್ 95(12)ನೇ ಕ್ರಮಾಂಕದ ಅಧಿಸೂಚನೆ.

27) ನಿರ್ದಿಷ್ಟಪಡಿಸಿದ ಸರಕುಗಳ ಮಾರಾಟದ ಮೇಲೆ ಸಂದಾಯ ಮಾಡಬೇಕಾದ ತೆರಿಗೆಯ ವಿನಾಯಿತಿ ನೀಡುವ ಬಗ್ಗೆ ದಿನಾಂಕ 31.3.1995 ರಂದು ಹೊರಡಿಸಲಾದ ಎಫ್‌ಡಿ 49 ಸಿಎಸ್‌ಎಲ್ 95(13)ನೇ ಕ್ರಮಾಂಕದ ಅಧಿಸೂಚನೆ.

28) ಕರ್ನಾಟಕ ರಾಜ್ಯದಲ್ಲಿ ಪೇಪರ್ ಮತ್ತು ಪೇಪರ್ ಬೋರ್ಡ್ ತಯಾರಿಕೆಯಲ್ಲ ತಯಾರಿಕರು ಉಪಯೋಗಿಸುವುದಕ್ಕಾಗಿ ಅವರಿಗೆ ಮಾರಿದಾಗ ನೀಲಗಿರಿ ಮರ ಮತ್ತು ಸರ್ವೆ ಮರದ ಮೇಲೆ ವ್ಯಾಪಾರಿಯು ಸಂದಾಯ ಮಾಡಬೇಕಾದ ತೆರಿಗೆಯನ್ನು ಶೇ.10ಕ್ಕೆ ಇಳಿಸುವ ಬಗ್ಗೆ ದಿನಾಂಕ 31.3.1995ರಂದು ಹೊರಡಿಸಲಾದ ಎಫ್‌ಡಿ 49 ಸಿಎಸ್‌ಎಲ್ 95(14)ನೇ ಕ್ರಮಾಂಕದ ಅಧಿಸೂಚನೆ.

29) ರಾಜ್ಯದಲ್ಲಿರುವ ಕೈಗಾರಿಕಾ ಘಟಕಕ್ಕೆ ಹತ್ತಿ ಬೀಜಗಳ ಮಾರಾಟದ ಮೇಲೆ ವ್ಯಾಪಾರಿಯು ಸಂದಾಯ ಮಾಡಬೇಕಾದ ತೆರಿಗೆಯನ್ನು ಶೇ. 2ಕ್ಕೆ ಇಳಿಸುವ ಬಗ್ಗೆ ದಿನಾಂಕ 31.3.1995ರಂದು ಹೊರಡಿಸಲಾದ ಎಫ್‌ಡಿ 49 ಸಿಎಸ್‌ಎಲ್ 95(15)ನೇ ಕ್ರಮಾಂಕದ ಅಧಿಸೂಚನೆ.

30) ರಾಜ್ಯದಲ್ಲಿರುವ ಕೈಗಾರಿಕಾ ಘಟಕಕ್ಕೆ ಡೀಸಲ್ ಮತ್ತು ಕುಲುಮೆ ಎಣ್ಣೆಯ ಮಾರಾಟದ ಮೇಲೆ ವ್ಯಾಪಾರಿಯ ಸಂದಾಯ ಮಾಡಬೇಕಾದ ತೆರಿಗೆಯನ್ನು ಶೇ. 4ಕ್ಕೆ ಇಳಿಸುವ ಸಂಬಂಧದಲ್ಲಿ ದಿನಾಂಕ 31.3.1995 ರಂದು ಹೊರಡಿಸಲಾದ ಎಫ್‌ಡಿ 49 ಸಿಎಸ್‌ಎಲ್ 95(16)ನೇ ಕ್ರಮಾಂಕದ ಅಧಿಸೂಚನೆ.

31) ಸರಕುಗಳ ಎಂದರೆ ಕೊಬ್ಬರಿ, ಕಡಲೆಕಾಯಿಗಳ ಮತ್ತು ಸೂರ್ಯಕಾಂತಿ ಬೀಜಗಳ ಮಾರಾಟ ಅಥವಾ ಖರೀದಿ ಮೇಲೆ ವ್ಯಾಪಾರಿಯು ಸಂದಾಯ ಮಾಡಬೇಕಾದ ತೆರಗೆಯನ್ನು ಇಳಿಸುವ ಬಗ್ಗೆ ದಿನಾಂಕ 31.3.1995 ರಂದು ಹೊರಡಿಸಲಾದ ಎಫ್‌ಡಿ 49 ಸಿಎಸ್‌ಎಲ್ 95(17)ನೇ ಕ್ರಮಾಂಕದ ಅಧಿಸೂಚನೆ.

32) ವ್ಯಾಪಾರಿಯೂ ಘೋಷಣೆಯನ್ನು ಮಾಡಿ, ಅದರ ಪ್ರತಿಯನ್ನು ಒದಗಿಸಬೇಕೆಂಬ ಷರತ್ತುಗೊಳಪಟ್ಟು ವಿದ್ಯುಚ್ಛಕ್ತಿಯ ಪ್ರವರ್ತನೆ ಮತ್ತು ವಿತರಣೆಯಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಉಪಯೋಗಿಸಲು ಅದಕ್ಕೆ ಡೀಸಲ್ ಮಾರಾಟದ ಮೇಲೆ ವ್ಯಾಪಾರಿಯು ಸಂದಾಯ ಮಾಡಬೇಕಾದ ತೆರಿಗೆಯನ್ನು ಶೇ.4ಕ್ಕೆ ಇಳಿಸುವ ಬಗ್ಗೆ ದಿನಾಂಕ 31.3.1995 ರಂದು ಹೊರಡಿಸಲಾದ ಎಫ್‌ಡಿ 49 ಸಿಎಸ್‌ಎಲ್ 95(18)ನೇ ಕ್ರಮಾಂಕದ ಅಧಿಸೂಚನೆ.

33) ಕಚ್ಚಾ ರಬ್ಬರಿನ ಖರೀದಿ ಮೇಲೆ ಕರ್ನಾಟಕದಲ್ಲಿ ಸಣ್ಣ ಪ್ರಮಾಣದ ಕೈಗಾರಿಕಾ ಘಟಕವು ಸಂದಾಯ ಮಾಡಬೇಕಾದ ತೆರಿಗೆಯನ್ನು ಶೇ. 4ಕ್ಕೆ ಇಳಿಸುವ ಬಗ್ಗೆ ದಿನಾಂಕ 31.3.1995 ರಂದು ಹೊರಡಿಸಲಾದ ಎಫ್‌ಡಿ 49 ಸಿಎಸ್‌ಎಲ್ 95(19)ನೇ ಕ್ರಮಾಂಕದ ಅಧಿಸೂಚನೆ

34) ಜಲಜನಕ ಸೇರಿಸಿದ ಎಣ್ಣೆಯ ಮತ್ತು ಅಡಿಗೆ ಮಾಡುವ ಎಣ್ಣೆಯ ಮಾರಾಟಕ್ಕೆ ಸಂಬಂಧಿಸಿದ ವಹಿವಾಟಗಳ ಮೇಲೆ ವ್ಯಾಪಾರಿಯು ಸಂದಾಯ ಮಾಡಬೇಕಾದ ವಹಿವಾಟು ತೆರಿಗೆಯ ವಿನಾಯಿತಿಯ ಬಗ್ಗೆ ದಿನಾಂಕದ 31.3.1995 ರಂದು ಹೊರಡಿಸಲಾದ ಎಫ್‌ಡಿ 49 ಸಿಎಸ್‌ಎಲ್ 95(20)ನೇ ಕ್ರಮಾಂಕದ ಅಧಿಸೂಚನೆ.

35) ಟ್ರಾಕ್ಟರ್ ಮತ್ತು ಪವರ್ ಟಿಲ್ಲರ್‌ಗಳ ಮಾರಾಟಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ವಹಿವಾಟು ತೆರಿಗೆಯ ವಿನಾಯಿತಿಯ ಬಗ್ಗೆ ಹೊರಡಿಸಲಾದ ಎಫ್‌ಡಿ 49 ಸಿಎಸ್‌ಎಲ್ 95(21)ನೇ ಕ್ರಮಾಂಕದ ಅಧಿಸೂಚನೆ.

36) ದ್ವಿದಳ ಧಾನ್ಯಗಳ ಮಾರಾಟಕ್ಕೆ ಅಥವಾ ಖರೀದಿಗೆ ಸಂಬಂಧಿಸಿದ ವಹಿವಾಟಿನ ಮೇಲೆ ವ್ಯಾಪಾರಿಯು ಸಂದಾಯ ಮಾಡಬೇಕಾದ ವಹಿವಾಟು ತೆರಿಗೆಯ ವಿನಾಯಿತಿಯ ದಿನಾಂಕ 31.3.1995 ರಂದು ಹೊರಡಿಸಲಾದ ಎಫ್‌ಡಿ 49 ಸಿಎಸ್‌ಎಲ್ 95(22)ನೇ ಕ್ರಮಾಂಕದ ಅಧಿಸೂಚನೆ.

37) ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿಯಲ್ಲಿ ಪಾಮೋಲಿನ್ ಎಣ್ಣೆಯ ಮಾರಾಟಗಳಿಗೆ ಸಂಬಂಧಿಸಿದ ವಹಿವಾಟಿನ ಮೇಲೆ ಸಗಟು ನಾಮಿನಿಗಳಿಗೆ ವಹಿವಾಟು ತೆರಿಗೆಯ ವಿನಾಯಿತಿಯ ಬಗ್ಗೆ ದಿನಾಂಕ 31.3.1995 ರಂದು ಹೊರಡಿಸಲಾದ ಎಫ್‌ಡಿ 49 ಸಿಎಸ್‌ಎಲ್ 95(23)ನೇ ಕ್ರಮಾಂಕದ ಅಧಿಸೂಚನೆ.

38) ವಾರ್ಷಿಕ ವಹಿವಾಟು ರೂ. 500 ಲಕ್ಷಗಳಿಗಿಂತ ಕಡಿಮೆ ಇದ್ದು ಅಂತಹ ವಹಿವಾಟಿನಲ್ಲಿ ವ್ಯಾಪಾರ ಪ್ರಾರಂಭವಾದ ದಿನಾಂಕದಿಂದ ವರ್ಷದೊಳಗೆ ಆಗಿರಬಹುದಾದ

ರೂ. 200 ಲಕ್ಷಗಳ ವಹಿವಾಟನ್ನು ಲೆಕ್ಕಕ್ಕೆ ತೆಗೆದುಕೊಂಡು ಶೇ. 1.25 ರಷ್ಟಕ್ಕೆ ತೆರಿಗೆ ಕಡಿಮೆಗೊಳಿಸಿ ದಿನಾಂಕ 31.3.1995 ರಂದು ಹೊರಡಿಸಿದ ಎಫ್‌ಡಿ 49 ಸಿಎಸ್‌ಎಲ್ 95(24)ನೇ ಕ್ರಮಾಂಕದ ಅಧಿಸೂಚನೆ.

39) ಮಾರಾಟಕ್ಕಾಗಿ ರಾಜ್ಯದಲ್ಲಿ ಅಗರಬತ್ತಿಯ ತಯಾರಿಕೆಯಲ್ಲಿ ಉಪಯೋಗಿಸಿದ ಕಚ್ಚಾ ಬತ್ತಿಗಳ ಖರೀದಿಗೆ ಸಂಬಂಧಿಸಿದ ವಹಿವಾಟುಗಳ ಸಂಬಂಧದಲ್ಲಿ ಅಗರಬತ್ತಿಯ ತಯಾರಿಕೆಗೆ ವಹಿವಾಟು ತೆರಿಗೆಯ ವಿನಾಯಿತಿಯ ಬಗ್ಗೆ ದಿನಾಂಕ 31.3.1995 ರಂದು ಹೊರಡಿಸಲಾದ ಎಫ್‌ಡಿ 49 ಸಿಎಸ್‌ಎಲ್ 95(25)ನೇ ಕ್ರಮಾಂಕದ ಅಧಿಸೂಚನೆ.

40) ಕಾಫಿಕಾಯಿ ಅಥವಾ ಬೀಜಗಳ (ಹಸಿ ಅಥವಾ ಹುರಿದ) ಮಾರಾಟ ಅಥವಾ ಖರೀದಿಗೆ ಸಂಬಂಧಪಟ್ಟಂತೆ ಮಾರಾಟದ ಮೇಲೆ ವ್ಯಾಪಾರಿಗೆ ಮಾರಾಟ ತೆರಿಗೆಯ ವಿನಾಯಿತಿಯ ಬಗ್ಗೆ ದಿನಾಂಕ 31.3.1995 ರಂದು ಹೊರಡಿಸಲಾದ ಎಫ್‌ಡಿ 49 ಸಿಎಸ್‌ಎಲ್ 95(26)ನೇ ಕ್ರಮಾಂಕದ ಅಧಿಸೂಚನೆ

41) ನಿರ್ದಿಷ್ಟ ಸರಕುಗಳ ಮಾರಾಟ ಅಥವಾ ಖರೀದಿಯ ಮೇಲಿನ ಅಧಿಭಾರದ ವಿನಾಯಿತಿಯ ಬಗ್ಗೆ ದಿನಾಂಕ 31.3.1995 ರಂದು ಹೊರಡಿಸಲಾದ ಎಫ್‌ಡಿ 49 ಸಿಎಸ್‌ಎಲ್ 95(27)ನೇ ಕ್ರಮಾಂಕದ ಅಧಿಸೂಚನೆ

42) ಸಣ್ಣ ಸಿಮೆಂಟ್ ಸ್ಥಾವರಕ್ಕೆ ಅದು ತಯಾರಿಸುವ ಸಿಮೆಂಟ್ ಮಾರಾಟದ ಮೇಲಿನ ಅಧಿಭಾರದೊಂದಿಗೆ ಶೇ. 10 ರಂತೆ ತೆರಿಗೆಯಲ್ಲಿ ಕಡಿತದ ಬಗ್ಗೆ ದಿನಾಂಕ 31.3.1995 ರಂದು ಹೊರಡಿಸಲಾದ ಎಫ್‌ಡಿ 49 ಸಿಎಸ್‌ಎಲ್ 95(28)ನೇ ಕ್ರಮಾಂಕದ ಅಧಿಸೂಚನೆ.

43) ಅಂತರರಾಜ್ಯ ವ್ಯಾಪಾರ ಅಥವಾ ವಾಣಿಜ್ಯದ ವ್ಯವಹಾರದಲ್ಲಿ ನಿರ್ದಿಷ್ಟ ಸರಕುಗಳ ಮಾರಾಟದ ಮೇಲೆ ವ್ಯಾಪಾರಿಗೆ ತೆರಿಗೆಯ ಕಡಿತವನ್ನು ನಿರ್ದಿಷ್ಟ ದರಗಳಲ್ಲಿ ಲೆಕ್ಕ ಹಾಕುವ ಬಗ್ಗೆ ದಿನಾಂಕ 31.3.1995 ರಂದು ಹೊರಡಿಸಲಾದ ಎಫ್‌ಡಿ 49 ಸಿಎಸ್‌ಎಲ್ 95(29)ನೇ ಕ್ರಮಾಂಕದ ಅಧಿಸೂಚನೆ.

44) ಪಾಲಿಶ್ ಮಾಡಿದ ಶಾಹಬಾದ್ ಕಲ್ಲುಗಳನ್ನು ಮಾರಾಟ ಮಾಡುವ ಸಂಬಂಧದಲ್ಲಿ ಪ್ರತಿವರ್ಷ ಎರಡು ಲಕ್ಷ ರೂ.ಗಳಿಗಿಂತ ಹೆಚ್ಚಾಗಿ ಇರದ ನಿಗದಿಯ ಆಸ್ತಿಯ ರೂಪದಲ್ಲಿ (ರೂಪರೇಷೆ ಯಂತ್ರಗಳು, ಭೂಮಿ, ಕಟ್ಟಡ ಮತ್ತು ಉತ್ಪಾದನಾ ಉದ್ದೇಶಗಳಿಗೆ ನೇರವಾಗಿ ಸಂಬಂಧಪಟ್ಟಿರುವಂತಹ ಆಸ್ತಿ) ಬಂಡವಾಳವನ್ನು ಹೂಡಿರುವಂತಹ ಔದ್ಯೋಗಿಕ ಘಟಕಗಳಿಗೆ ತೆರಿಗೆ ವಿನಾಯಿತಿಯ ಬಗ್ಗೆ ದಿನಾಂಕ 31.3.1995 ರಂದು ಹೊರಡಿಸಲಾದ ಎಫ್‌ಡಿ 49 ಸಿಎಸ್‌ಎಲ್ 95(30)ನೇ ಕ್ರಮಾಂಕದ ಅಧಿಸೂಚನೆ.

45) ಅಧಿಸೂಚನೆ ಸಂಖ್ಯೆ ಎಫ್‌ಡಿ 32 ಸಿಎಸ್‌ಎಲ್ 86(7), ದಿನಾಂಕ 28.3.1986ಕ್ಕೆ ತಿದ್ದುಪಡಿ ಬಗ್ಗೆ ದಿನಾಂಕ 31.3.1995 ರಂದು ಹೊರಡಿಸಲಾದ ಎಫ್‌ಡಿ 49 ಸಿಎಸ್‌ಎಲ್ 95(31)ನೇ ಕ್ರಮಾಂಕದ ಅಧಿಸೂಚನೆ.

46) ಅಂತರರಾಜ್ಯ ವ್ಯಾಪಾರ ಅಥವಾ ವಾಣಿಜ್ಯ ವ್ಯವಹಾರದ ಸಮಯದಲ್ಲಿ ಪಾಲಿಶ್ ಮಾಡಿದ ಶಹಬಾದ್ ಕಲ್ಲುಗಳ ಸಂಸ್ಕರಣೆ ಮತ್ತು ಮಾರಾಟಕ್ಕೆ ಸಂಬಂಧಪಟ್ಟಂತೆ ಪ್ರತಿವರ್ಷ ನಿಗದಿತ ಆಸ್ತಿಯ ರೂಪದಲ್ಲಿ ಎರಡು ಲಕ್ಷ ರೂ.ಗಳಿಗಿಂತ ಹೆಚ್ಚಾಗಿ ಬಂಡವಾಳ ಇರದಂತಹ ಔದ್ಯೋಗಿಕ ಘಟಕಗಳಿಗೆ ತೆರಿಗೆ ವಿನಾಯಿತಿಯ ಬಗ್ಗೆ ದಿನಾಂಕ 31.3.1995 ರಂದು ಹೊರಡಿಸಲಾದ ಎಫ್‌ಡಿ 49 ಸಿಎಸ್‌ಎಲ್ 95(32)ನೇ ಕ್ರಮಾಂಕದ ಅಧಿಸೂಚನೆ.

47) ಬಯೋ ಸಿಂಥೆಟಿಕ್ ಹ್ಯೂಮನ್ ಗ್ರೋತ್ ಹಾರ್ಮೋನ್,ಮಾರಾಟದ ಮೇಲೆ,ಕೂಡಲೇ ಪರಿಣಮಿಸುವಂತೆ ಮತ್ತು 31ನೇ ಮಾರ್ಚ್ 1996ರ ಅಂತ್ಯದವರೆಗಿನ ಅವಧಿಯವರೆಗೆ ತೆರಿಗೆ ವಿನಾಯಿತಿಯ ಬಗ್ಗೆ ದಿನಾಂಕ 17.4.1995ರಂದು ಹೊರಡಿಸಲಾದ ಎಫ್‌ಡಿ 24 ಸಿಎಸ್‌ಎಲ್ 95(1)ನೇ ಕ್ರಮಾಂಕದ ಅಧಿಸೂಚನೆ.

48) ಬಯೋ ಸಿಂಥೆಟಿಕ್ ಹ್ಯೂಮನ್ ಗ್ರೋತ್ ಹಾರ್ಮೋನ್, ಮಾರಾಟದ ವ್ಯಾಪಾರಿಗೆ ತೆರಿಗೆ ವಿನಾಯಿತಿಯ ಬಗ್ಗೆ ದಿನಾಂಕ 17.4.1995 ರಂದು ಹೊರಡಿಸಲಾದ ಎಫ್‌ಡಿ 24 ಸಿಎಸ್‌ಎಲ್ 95(2)ನೇ ಕ್ರಮಾಂಕದ ಅಧಿಸೂಚನೆ.

49) 'ಸಾರಾಯಿ' ಮಾರಾಟದ ವ್ಯಾಪಾರಿಗೆ ದಿನಾಂಕ 23ನೇ ಮೇ 1995ರಿಂದ ಪರಿಣಮಿಸುವಂತೆ ತೆರಿಗೆ ವಿನಾಯಿತಿಯ ಬಗ್ಗೆ ದಿನಾಂಕ 23ನೇ ಮೇ 1995 ರಂದು ಹೊರಡಿಸಲಾದ ಎಫ್‌ಡಿ 72ಸಿಎಸ್‌ಎಲ್ 95ನೇ ಕ್ರಮಾಂಕದ ಅಧಿಸೂಚನೆ.

50) ಅಧಿಸೂಚನೆ ಸಂಖ್ಯೆ ಎಫ್‌ಡಿ 43 ಸಿಇಟಿ 95(6), ದಿನಾಂಕ 31.3.1995ರ ರದ್ದಿಯಾತಿ ಬಗ್ಗೆ ದಿನಾಂಕ 29.5.1995 ರಂದು ಹೊರಡಿಸಲಾದ ಎಫ್‌ಡಿ 63 ಸಿಇಟಿ 95(1)ನೇ ಕ್ರಮಾಂಕದ ಅಧಿಸೂಚನೆ.

51) ಮರ ಬೆಳೆಯುವ ಸಹಕಾರಿ ಸಂಘಗಳಿಗೆ ಸೌದೆ, ಜಾನುವಾರು, ಮೇವು, ಹಸಿರು ಗೊಬ್ಬರ ಮತ್ತು ಸಣ್ಣ ಅರಣ್ಯ ಉತ್ಪಾದನೆಗಳ ಮಾರಾಟಕ್ಕೆ ಮತ್ತು ರಾಷ್ಟ್ರೀಯ ಪುರ ಬೆಳೆಯುವ ಸಹಕಾರಿ ಸಂಘಗಳಿಗೆ ಮತ್ತು ರಾಷ್ಟ್ರೀಯಬಂಜರು ಭೂಮಿ ಅಭಿವೃದ್ಧಿ ಮಂಡಳಿಗಳಿಗೆ ಮರ ಬೆಳೆಯುವ ಸಂಘಗಳಿಗೆ ಮಾರಾಟ ಮಾಡುವ ಸರಕುಗಳಿಗೆ ತೆರಿಗೆ ವಿನಾಯಿತಿಯ ಬಗ್ಗೆ ದಿನಾಂಕ 14.6.1995 ರಂದು ಹೊರಡಿಸಲಾದ ಎಫ್‌ಡಿ 88ಸಿಎಸ್‌ಎಲ್ 94ನೇ ಕ್ರಮಾಂಕದ ಅಧಿಸೂಚನೆ.

52) ವೆಸ್ಟ್ ಕೋಸ್ಟ್ ಪೇಪರ್ ಮಿಲ್ಸ್ ಲಿಮಿಟೆಡ್‌ನವರು ತಯಾರಿಸುವ ಕಾಗದದ ಮಾರಾಟಕ್ಕೆ ತೆರಿಗೆಯ ಮುಂದೂಡುವಿಕೆಗೆ ಸಂಬಂಧಿಸಿದಂತೆ ದಿನಾಂಕ 26.6.1995 ರಂದು ಹೊರಡಿಸಲಾದ ಎಫ್‌ಡಿ 117 ಸಿಎಸ್‌ಎಲ್ 94(3)ನೇ ಕ್ರಮಾಂಕದ ಅಧಿಸೂಚನೆ,

53) ಅಧಿಸೂಚನೆ ಸಂಖ್ಯೆ 1, ಎಫ್‌ಡಿ 11 ಸಿಎಸ್‌ಎಲ್ 94, ದಿನಾಂಕ 4.1.1995ರ ಮೇರೆಗೆ ತೆರಿಗೆ ಮುಂದೂಡುವಿಕೆಗೆ ಅರ್ಹತೆಯನ್ನುಳ್ಳ 1ನೇ ಹಂತದಲ್ಲಿ 43 ಕೋಟಿ ರೂ.ಗಳ ಮತ್ತು 2ನೇ ಹಂತದಲ್ಲಿ 66ಕೋಟಿ ರೂ.ಗಳ ಬಂಡವಾಳದೊಂದಿಗೆ, ವಿಸ್ತರಣೆ:ವಿಭಿನ್ನತೆ:ಆದುನೀಕರಣವನ್ನು ಕೈಗೊಂಡಿರುವ ವೆಸ್ಟ್ ಕೋಸ್ಟ್ ಪೇಪರ್ ಮಿಲ್ಸ್ ಲಿಮಿಟೆಡ್‌ನವರು ತಯಾರಿಸುವ ಕಾಗದದ ಮಾರಾಟಕ್ಕೆ ವಾಣಿಜ್ಯ ಉತ್ಪಾದನೆಯ ಆರಂಭದ ದಿನಾಂಕದಿಂದ 5 ವರ್ಷಗಳ ಅವಧಿಯವರೆಗೆ ಮತ್ತು 2ನೇ ಹಂತವು ಪೂರ್ಣಗೊಂಡ ದಿನಾಂಕದಿಂದ 7 ವರ್ಷಗಳ ಮತ್ತಷ್ಟು ವಿಸ್ತರಣೆಗೆ ವೆಸ್ಟ್‌ಕೋಸ್ಟ್ ಪೇಪರ್ ಮಿಲ್ಸ್‌ನವರು ತಯಾರಿಸಿದ ಕಾಗದದ ಮಾರಾಟಕ್ಕೆ ಸಂದಾಯ ಮಾಡಬೇಕಾದ ತೆರಿಗೆಯ ಮುಂದೂಡುವಿಕೆಗೆ ಅನುಮತಿ ನೀಡಿರುವ ಬಗ್ಗೆ ದಿನಾಕ 26.6.1995 ರಂದು ಹೊರಡಿಸಲಾದ ಎಫ್‌ಡಿ 117 ಸಿಎಸ್‌ಎಲ್ 94(4)ನೇ ಕ್ರಮಾಂಕದ ಅಧಿಸೂಚನೆ.

54) ಅಂತರರಾಜ್ಯ ವ್ಯಾಪಾರ ಅಥವಾ ವಾಣಿಜ್ಯ ವ್ಯವಹಾರದಲ್ಲಿ ಕಬ್ಬಿಣ ಮತ್ತು ಉಕ್ಕು ಹಾಗೂ ಉಕ್ಕಿನ ಕೊಳವೆಗಳನ್ನು ಮಾರಾಟ ಮಾಡುವ ಸಮಯದಲ್ಲಿ, ವ್ಯಾಪಾರಿಯು ಕರ್ನಾಟಕ ರಾಜ್ಯದಲ್ಲಿ ತನ್ನ ವ್ಯಾಪಾರವನ್ನು ಮಾಡಬೇಕಾಗಿದ್ದು ಆಂಧ್ರ ಪ್ರದೇಶದ ಶ್ರೀ ಸತ್ಯ ಸಾಯಿ ಸೆಂಟ್ರಲ್ ಟ್ರಸ್ಟ್‌ನಂತಹ ಸ್ಥಳಗಳಲ್ಲಿ ವ್ಯಾಪಾರ ಮಾಡಿದಾಗ ವ್ಯಾಪಾರಿಗೆ ತೆರಿಗೆ ವಿನಾಯಿತಿಯ ಬಗ್ಗೆ ದಿನಾಂಕ

29.6.1995 ರಂದು ಹೊರಡಿಸಲಾದ ಎಫ್‌ಡಿ 85 ಸಿಎಸ್‌ಎ 95ನೇ ಕ್ರಮಾಂಕದ ಅಧಿಸೂಚನೆ.

1976ರ ಕರ್ನಾಟಕ ವೃತ್ತಿ, ವ್ಯಾಪಾರ ಆರ್ಜಿವಿಕೆ ಮತ್ತು ಉದ್ಯೋಗಗಳ ಮೇಲಿನ ಕರಗಳ ಕಾಯ್ದೆಯ 33ನೇ ಕಲಮಿನ ಮೇರೆಗೆ.

55) ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೇರೆಗೆ ಪಡಿತರ ಚೀಟಿ ಹೊಂದಿರುವವರಿಗೆ ವಿಶೇಷವಾಗಿ ಪಡಿತರ ಸಾಮಾನುಗಳನ್ನು ಮಾರಾಟ ಮಾಡುವ ವ್ಯಕ್ತಿಗೆ ತೆರಿಗೆ ವಿನಾಯಿತಿ ನೀಡುವ ಬಗ್ಗೆ ದಿನಾಂಕ 31.3.1995 ರಂದು ಹೊರಡಿಸಲಾದ ಎಫ್‌ಡಿ 4 ಸಿಪಿಟಿ 95ನೇ ಕ್ರಮಾಂಕದ ಅಧಿಸೂಚನೆ.

1978ರ ಕರ್ನಾಟಕ ರಾಜ್ಯ ಸರ್ಕಾರ ಸೇವೆಗಳ ಅಧಿನಿಯಮದ 8(3)ನೇ ಕಲಮಿನ ಮೇರೆಗೆ

56) ಸರ್ಕಾರಿ ನೌಕರರ ರಜಾ ನಿಯಮಗಳ ಸರಳೀಕರಣದ ಸಂಬಂಧದಲ್ಲಿ ದಿನಾಂಕ 22.2.1995 ರಂದು ಹೊರಡಿಸಲಾದ ಎಫ್‌ಡಿ 2 ಎಸ್‌ಸಿಎಲ್ 93ನೇ ಕ್ರಮಾಂಕದ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

VII. ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿ)

(ಶ್ರೀ ಆರ್.ವಿ. ದೇಶಪಾಂಡೆ) ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಮಂತ್ರಿ ಅವರ ಪರವಾಗಿ : ಮಾನ್ಯ ಅಧ್ಯಕ್ಷರೇ,

1956ರ ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಕಾಯ್ದೆಯ 26ನೇ ಕಲಮಿನ ಮೇರೆಗೆ.

1) 1991-92ನೇ ಸಾಲಿನ ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ವಾರ್ಷಿಕ ವರದಿ ಹಾಗೂ 1990-91ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ.

1956ರ ಕಂಪನಿಗಳ ಕಾಯ್ದೆಯ ನಿಯಮ 619ಎ ಕಲಮಿನ ಮೇರೆಗೆ.

2) 1993-94ನೇ ಸಾಲಿನ ತುಂಗಭದ್ರ ಸ್ಟೀಲ್ ಪ್ರಾಡಕಟ್ಸ್ ನಿಯಮಿತದ 34ನೇ ವಾರ್ಷಿಕ ವರದಿ.

3) 1993-94ನೇ ಸಾಲಿನ ತುಂಗಭದ್ರಾ ಸ್ಟೀಲ್ ಪ್ರಾಡಕಟ್ಸ್ ನಿಯಮಿತದ 34ನೇ ವಾರ್ಷಿಕ ವರದಿ.,

4) 1993-94ನೇ ಸಾಲಿನ ಕರ್ನಾಟಕ ಇಂಪ್ಲಿಮೆಂಟ್ಸ್ ಮತ್ತು ಮೆಷಿನರೀಸ್ ಕಂಪನಿ ನಿಯಮಿತದ 19ನೇ ವಾರ್ಷಿಕ ವರದಿ.

5) 1993-94ನೇ ಸಾಲಿನ ಮೈಸೂರು ಕಾಸ್ಮೆಟಿಕ್ಸ್ ನಿಯಮಿತದ 28ನೇ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ.

VIII. ಶ್ರೀ ಹೆಚ್.ಡಿ. ದೇವೇಗೌಡ : (ಮುಖ್ಯಮಂತ್ರಿ)

(ಶ್ರೀ ಪಿ.ಜಿ.ಆರ್. ಸಿಂಧ್ಯಾ) ಒಳಾಡಳಿತ ಮಂತ್ರಿ ಅವರ ಪರವಾಗಿ ಮಾನ್ಯ ಅಧ್ಯಕ್ಷರೆ.

1964ರ ಕರ್ನಾಟಕ ಸಿನಿಮಾ (ನಿಯಂತ್ರಣ)ಅಧಿನಿಯಮ 20ರ ಕಲಮಿನ ಮೇರೆಗೆ

1) ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು ಕೆಸ್ತೂರು ಗ್ರಾಮದ ಶ್ರೀ ರಾಘವೇಂದ್ರ ಸಂಚಾರಿ ಚಿತ್ರಮಂದಿರವನ್ನು ತಾತ್ಕಾಲಿಕ ಚಿತ್ರಮಂದಿರವನ್ನಾಗಿ ಪರಿವರ್ತಿಸುವ ಬಗ್ಗೆ

ಅನುಮತಿ ನೀಡಿರುವ ಬಗ್ಗೆ ದಿನಾಂಕ 17.4.1995 ರಂದು ಹೊರಡಿಸಲಾದ ಹೆಚ್‌ಡಿ 34 ಸಿಎನ್‌ಎ 94ರ ಅಧಿಸೂಚನೆ.

2) ಶ್ರೀ ಹನುಮಂತಪ್ಪ ಈಶ್ವರಪ್ಪ ಕಂಚಿಕೊರವರ್‌ರವರ ಸಂಚಾರಿ ಚಿತ್ರಮಂದಿರವನ್ನು ಅರೆ ಖಾಯಂ ಚಿತ್ರ ಮಂದಿರವನ್ನಾಗಿ ಪರಿವರ್ತಿಸಲು ನಿರಾಕ್ಷೇಪಣಾ ಪತ್ರದ ಅವಧಿಯನ್ನು ವಿಸ್ತರಿಸಿ ದಿನಾಂಕ 20.4.1995 ರಂದು ಹೊರಡಿಸಲಾದ ಹೆಚ್‌ಡಿ 134 ಸಿಎನ್‌ಎ 94ರ ಅಧಿಸೂಚನೆ.

3) ಉತ್ತರ ಕನ್ನಡ ಜಿಲ್ಲೆ ದಾಂಡೇಲಿಯ ವೆಸ್ಟ್‌ಕೋಸ್ಟ್ ಪೇಪರ್ ಮಿಲ್ಸ್‌ರವರು ತಮ್ಮ ಸಭಾಂಗಣದಲ್ಲಿ 35 ಎಂಎಂ ಚಲನಚಿತ್ರ ಪ್ರದರ್ಶಿಸಲು ಅನುಮತಿ ನೀಡಿರುವ ಬಗ್ಗೆ ದಿನಾಂಕ 5.5.1995 ರಂದು ಹೊರಡಿಸಲಾದ ಹೆಚ್‌ಡಿ 154 ಸಿಎನ್‌ಎ 94ರ ಆದೇಶ.

4) ಬೆಳಗಾಂನ ಮರಾಠಾ ರೈಟ್ ಇನ್‌ಫೆಂಟ್ರಿ ರೆಜಿಮೆಂಟಲ್ ಕೇಂದ್ರದಲ್ಲಿ 35 ಎಂಎಂ ಚಲನಚಿತ್ರ ಪ್ರದರ್ಶಿಸಲು ಅನುಮತಿ ನೀಡಿರುವ ಬಗ್ಗೆ ದಿನಾಂಕ 20.6.1995 ರಂದು ಹೊರಡಿಸಲಾದ ಹೆಚ್ 20 ಸಿಎನ್‌ಎ 95ರ ಆದೇಶ.

5) ಕಾರವಾರ ತಾಲ್ಲೂಕು ಬೆಣಗಾದಲ್ಲಿಯ ಬಳ್ಳಾಹುರ ಉದ್ದಿಮೆ ಲಿಮಿಟೆಡ್‌ರವರ ಆಡಿಟೋರಿಯಂನಲ್ಲಿ 35 ಎಂಎಂ ಚಲನಚಿತ್ರ ಪ್ರದರ್ಶಿಸಲು ಅನುಮತಿ ನೀಡಿರುವ ಬಗ್ಗೆ ದಿನಾಂಕ 22.6.1995 ರಂದು ಹೊರಡಿಸಲಾದ ಹೆಚ್‌ಡಿ 29 ಸಿಎನ್‌ಎ 95ರ ಆದೇಶ.

6) ಮಕ್ಕಳೇ ದೇವರು ಎಂಬ ಕನ್ನಡ ಅಂದ ಬಾಲಕರ ಸಮಸ್ಯೆಯ ಬಗ್ಗೆ ನಿರ್ಮಿಸಿರುವ ಚಿತ್ರವನ್ನು ಕರ್ನಾಟಕ ರಾಜ್ಯದಲ್ಲಿ ಪ್ರದರ್ಶಿಸುವ ಬಗ್ಗೆ ದಿನಾಂಕ 3.7.1995 ರಂದು ಹೊರಡಿಸಲಾದ ಹೆಚ್‌ಡಿ 314 ಸಿಎನ್‌ಎ 95ರ ಆದೇಶಗಳನ್ನು ಮಂಡಿಸುತ್ತೇನೆ.

IX. ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿ)

(ಶ್ರೀ ವೈಜನಾಥ ಪಾಟೀಲ್ ನಗರಾಭಿವೃದ್ಧಿ ಮಂತ್ರಿ ಅವರ ಪರವಾಗಿ) ಮಾನ್ಯ ಅಧ್ಯಕ್ಷರೆ,

ಭಾರತ ಸಂವಿಧಾನದ 213(2)(ಎ) ಅನುಚ್ಛೇದದ ಮೇರೆಗೆ.

1) 1995ನೇ ಇಸವಿ ಕರ್ನಾಟಕ ನಗರ ಪ್ರದೇಶಗಳಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ (ತಿದು ಪಡಿ) (ಸಂಖ್ಯೆ 3) ಅಧ್ಯಾದೇಶಕ್ಕೆ ಸಂಬಂಧಿಸಿದಂತೆ ದಿನಾಂಕ 3.6.95 ರಂದು ಹೊರಡಿಸಲಾದ ಎಲ್‌ಎಡಲಬ್ಲ್ಯು 8 ಎಲ್‌ಜಿಎನ್ 95ನೇ ಕ್ರಮಾಂಕದ ಅಧಿಸೂಚನೆ.

2) 1995ನೇ ಇಸವಿ ಕರ್ನಾಟಕ ಮುನಿಸಿಪಾಲಿಟಿ (ತಿದ್ದುಪಡಿ) (ಸಂಖ್ಯೆ 6) ಅಧ್ಯಾದೇಶಕ್ಕೆ ಸಂಬಂಧಿಸಿದಂತೆ ದಿನಾಂಕ 7.7.1995 ರಂದು ಹೊರಡಿಸಲಾದ ಎಲ್‌ಎಡಬ್ಲ್ಯು 26 ಎಲ್‌ಜಿಎನ್ 95ನೇ ಕ್ರಮಾಂಕದ ಅಧಿಸೂಚನೆ.

1973ರ ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಮತ್ತ ನಿರ್ಮೂಲನಾ) ಅಧಿನಿಯಮದ 41ನೇ ಕಲಂ ಹಾಗೂ 1962ರ ಗೃಹ ಮಂಡಳಿ ಕಾಯ್ದೆಯ 55(3)ನೇ ಕಲಮಿನ ಮೇರೆಗೆ.

3) 1992-93 ಹಾಗೂ 1993-94ನೇ ಸಾಲುಗಳ ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯ ಲೆಕ್ಕಪರಿಶೋಧನಾ ವರದಿಗಳು.

4) 1989-90ನೇ ಸಾಲಿನ ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯ ವಾರ್ಷಿಕ ವರದಿ.

1973ರ ಕರ್ನಾಟಕ ನಗರ ನೀರು ಸರಬರಾಜು ಹಾಗೂ ಒಳ ಚರಂಡಿ ಮಂಡಳಿ ಅಧಿನಿಯಮದ 42(2)(ಎ) ಕಲಮಿನ ಮೇರೆಗೆ.

5) 1992-93ನೇ ಸಾಲಿನ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಲೆಕ್ಕಗಳು ಹಾಗೂ ಲೆಕ್ಕಪರಿಶೋಧನಾ ವರದಿ.

1980ರ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಅಧಿನಿಯಮದ 25ನೇ ಕಲಮಿನ ಮೇರೆಗೆ.

6) 1993-94ನೇ ಸಾಲಿನ ಆಯಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ, ಕೃಷ್ಣಾ ಮೇಲ್ದಂಡೆ ಯೋಜನೆಯ ವಾರ್ಷಿಕ ವರದಿ.

7) 1993-94ನೇ ಸಾಲಿನ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ತುಂಗಭದ್ರಾ ಯೋಜನೆಯ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ.

X. ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿ)

(ಶ್ರೀ ಸಿ. ಬೈರೇಗೌಡ (ಕೃಷಿ ಮಂತ್ರಿ)ಅವರ : ಪರವಾಗಿ) : ಮಾನ್ಯ ಅಧ್ಯಕ್ಷರೆ. 1956ರ ಕಂಪನಿಗಳ ಕಾಯ್ದೆಯ 619ಎ ಕಲಮಿನ ಮೇರೆಗೆ.

1) 1993-94ನೇ ಸಾಲಿನ ಮೈಸೂರು ಟೊಬ್ಯಾಕೊ ಕಂಪನಿ ನಿಯಮಿತದ 57ನೇ ವಾರ್ಷಿಕ ವರದಿ ಹಾಗೂ ಲೆಕ್ಕ ಪರಿಶೋಧನಾ ವರದಿ.

2) 1992-93ನೇ ಸಾಲಿನ ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತದ 20ನೇ ವಾರ್ಷಿಕ ವರದಿ.

1963ರ ಕೃಷಿ ವಿಶ್ವವಿದ್ಯಾಲಯಗಳ ಕಾಯ್ದೆಯ 38(3)ನೇ ಕಲಮಿನ ಮೇರೆಗೆ.

3) 1993-94ನೇ ಸಾಲಿನ ಧಾರವಾಡದ ಕೃಷಿ ವಿಶ್ವವಿದ್ಯಾಲಯದ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ.

XI. ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿ)

(ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ವಾರ್ತಾ ಮಂತ್ರಿಗಳು) ಅವರ :ಪರವಾಗಿ) : ಮಾನ್ಯ ಅಧ್ಯಕ್ಷರೆ, 1986 ನ್ಯಾಷನಾಲ್ ಲಾ ಸ್ಕೂಲ್ ಆಫ್ ಇಂಡಿಯಾ ಅಧಿನಿಯಮದ 26(2)ನೇ ಕಲಮಿನ ಮೇರೆಗೆ.

4) 1992-93 ಹಾಗೂ 1993-94ನೇ ಸಾಲುಗಳ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿಯ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ.

XII.ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿ)

(ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಮಂತ್ರಿ) ಅವರ: ಪರವಾಗಿ : ಮಾನ್ಯ ಅಧ್ಯಕ್ಷರೆ.

1956ರ ಕಂಪನಿಗಳ ಕಾಯ್ದೆಯ 619ಎ ಕಲಮಿನ ಮೇರೆಗೆ.

1993-94ನೇ ಸಾಲಿನ ಕರ್ನಾಟಕ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತದ 8ನೇ ವಾರ್ಷಿಕ ವರದಿ ಮತ್ತು ಲೆಕ್ಕ ಪತ್ರಗಳನ್ನು ಮಂಡಿಸುತ್ತೇನೆ.

XIIIಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿ)

(ಶ್ರೀ ತಿಪ್ಪೇಸ್ವಾಮಿ (ಅಬಕಾರಿ ಮಂತ್ರಿ) ಅವರ : ಪರವಾಗಿ : ಮಾನ್ಯ ಅಧ್ಯಕ್ಷರೆ,

1965ನೇ ಇಸವಿ ಕರ್ನಾಟಕ ಅಬಕಾರಿ ಅಧಿನಿಯಮ 71(4)ನೇ ಕಲಮಿನ ಮೇರೆಗೆಯ

1) 1969ನೇ ಇಸವಿ ಕರ್ನಾಟಕ ಅಬಕಾರಿ(ಚಿಲ್ಲರೆ ಮದ್ಯ ಮಾರಾಟ ಗುತ್ತಿಗೆ ಹಕ್ಕು) ನಿಯಮಗಳ ತಿದ್ದುಪಡಿ ಬಗ್ಗೆ ದಿನಾಂಕ 10.5.1995ರಂದು ಹೊರಡಿಸಲಾದ ಸಂಖ್ಯೆ ಎಫ್‌ಡಿ 3 ಪಿಇಎಸ್ 95ರ ಅಧಿಸೂಚನೆ.

2) 1969ನೇ ಇಸವಿ ಕರ್ನಾಟಕ ಅಬಕಾರಿ ಪರವಾನಗಿ(ಸಾಮಾನ್ಯ ಷರತ್ತುಗಳು) ತಿದ್ದುಪಡಿ ಬಗ್ಗೆ ದಿನಾಂಕ 23.5.1995 ರಂದು ಹೊರಡಿಸಲಾದ ಸಂಖ್ಯೆ ಎಫ್‌ಡಿ 7 ಪಿಇಎಸ್ 95(1)ವ ಅಧಿಸೂಚನೆ.

3) 1968ನೇ ಇಸವಿ ಕರ್ನಾಟಕ ಅಬಕಾರಿ (ದೇಶೀಯ ಮತ್ತು ವಿದೇಶಿ ಮದ್ಯ ಮಾರಾಟ)ದ ತಿದ್ದುಪಡಿ ಬಗ್ಗೆ ದಿನಾಂಕ 31.5.1995 ರಂದು ಹೊರಡಿಸಲಾದ ಸಂಖ್ಯೆ ಎಫ್‌ಡಿ 10 ಪಿಇಎಸ್ 95(1)ರ ಅಧಿಸೂಚನೆ.

4) 1967ನೇ ಇಸವಿ ಕರ್ನಾಟಕ ಅಬಕಾರಿ (ಡಿಸ್ಟಿಲರಿ ಮತ್ತು ಉಗ್ರಾಣ)ದ ತಿದ್ದುಪಡಿ ಬಗ್ಗೆ ದಿನಾಂಕ 31.5.1995 ರಂದು ಹೊರಡಿಸಲಾದ ಎಫ್‌ಡಿ 10 ಪಿಇಎಸ್ 95(2)ರ ಅಧಿಸೂಚನೆ.

5) 1967ನೇ ಇಸವಿ ಕರ್ನಾಟಕ ಅಬಕಾರಿ (ಮದ್ಯ ತಯಾರಿಕೆ) ತಿದ್ದುಪಡಿ ಬಗ್ಗೆ ದಿನಾಂಕ 31.5.1995 ರಂದು ಹೊರಡಿಸಲಾದ ಸಂಖ್ಯೆ ಎಫ್‌ಡಿ 10 ಪಿಇಎಸ್ 95(3)ರ ಅಧಿಸೂಚನೆ.

6) 1976ನೇ ಇಸವಿ ಕರ್ನಾಟಕ ಅಬಕಾರಿ (ಚಿಲ್ಲರೆ ಬೀಯರ್ ಮಾರಾಟದ ಹಕ್ಕು) ತಿದ್ದುಪಡಿ ಬಗ್ಗೆ ದಿನಾಂಕ 31.5.1995ರಂದು ಹೊರಡಿಸಲಾದ ಸಂಖ್ಯೆ ಎಫ್‌ಡಿ 10 ಪಿಇಎಸ್ 95(4)ವ ಅಧಿಸೂಚನೆ.

7) 1976ನೇ ಇಸವಿ ಕರ್ನಾಟಕ ಅಬಕಾರಿ (ದ್ರಾಕ್ಷಿಯಿಂದ ವೈನ ತಯಾರಿಕೆ)ಯ ತಿದ್ದುಪಡಿ ಬಗ್ಗೆ ದಿನಾಂಕ 31.5.1995 ರಂದು ಹೊರಡಿಸಲಾದ ಸಂಖ್ಯೆ ಎಫ್‌ಡಿ 10 ಪಿಇಎಸ್ 95(5)ರ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

XIVಶ್ರೀ ಹಚ್.ಡಿ. ದೇವೇಗೌಡ, (ಮುಖ್ಯಮಂತ್ರಿ)

(ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಮಂತ್ರಿ)ಅವರ:ಪರವಾಗಿ : ಮಾನ್ಯ ಅಧ್ಯಕ್ಷರೆ. 1950ನೇ ಸಾಲಿನ ರಸ್ತೆ ಸಾರಿಗೆ ಸಂಸ್ಥೆಗಳ ಅಧಿನಿಯಮದ 33(4)ನೇ ಕಲಮಿನ ಮೇರೆಗೆ.

1) 1993-94ನೇ ಸಾಲಿನ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಲೆಕ್ಕ ಪತ್ರಗಳು ಹಾಗೂ ಲೆಕ್ಕ ಪರಿಶೋಧನಾ ವರದಿ.

1950ರ ರಸ್ತೆ ಸಾರಿಗೆ ಸಂಸ್ಥೆಗಳ ಅಧಿನಿಯಮದ 35(3)ನೇ ಕಲಮಿನ ಮೇರೆಗೆ.

2) 1993-94ನೇ ಸಾಲಿನ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಾರ್ಷಿಕ ಆಡಳಿತ ವರದಿಗಳನ್ನು ಮಂಡಿಸುತ್ತೇನೆ.

XV.ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿ)

(ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಮಂತ್ರಿ)ಅವರ: ಪರವಾಗಿ : ಮಾನ್ಯ ಅಧ್ಯಕ್ಷರೆ, 1959ನೇ ಇಸವಿಯ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 13ರ ಕಲಮಿನ ಮೇರೆಗೆ.

1) ಬಳ್ಳಾರಿ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿಯಮಿತದ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆಯನ್ನು ಮುಂದೂಡಿರುವುದರ

ಬಗ್ಗೆ ದಿನಾಂಕ 31.1.1995 ರಂದು ಹೊರಡಿಸಲಾದ ಸಿಎಂಡಬ್ಲ್ಯೂ 20 ಸಿಎಲ್‌ಎಂ 95ರ ಆದೇಶ.

2) ಸಿರ್ಸಿ ಪಟ್ಟಣ ಸಹಕಾರಿ ಬ್ಯಾಂಕ್ ನಿಯಮಿತ ಸಿರ್ಸಿಗೆ ಒಂದು ವರ್ಷದ ಅವಧಿಗೆ. ವಿನಾಯಿತಿ ನೀಡುವ ಬಗ್ಗೆ ದಿನಾಂಕ 3.2.1995 ರಂದು ಹೊರಡಿಸಲಾದ ಸಿಎಂಡಬ್ಲ್ಯೂ 13 ಸಿಎಲ್‌ಎಂ 95ರ ಆದೇಶ.

3) ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ, ಮಡಿಕೇರಿ ಇದಕ್ಕೆ 'ನಿಬಂಧಕರು' ಎಂಬ ಪದದ ಮುಂದೆ ಅಥವಾ ದಿ ನ್ಯಾಷನಲ್ ಥರ್ಮಾಲ್ ಪವರ ಕಾರ್ಪೋರೇಷನ್ ಲಿಮಿಟೆಡ್ ನ್ಯೂ ಡೆಲ್ಲಿ' ಮಾರ್ಪಾಡಿನ ಬಗ್ಗೆ ದಿನಾಂಕ 25.1.1995 ರಂದು ಹೊರಡಿಸಲಾದ ಸಿಎಂಡಬ್ಲ್ಯೂ 342 ಸಿಎಲ್‌ಎಂ 94ರ ಆದೇಶ.

4) ಕರ್ನಾಟಕ ರಾಜ್ಯ ನ್ಯಾಯಾಂಗ ಇಲಾಖೆ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ. ಬೆಂಗಳೂರು ಇದಕ್ಕೆ ವಿನಾಯಿತಿ ನೀಡುವ ಬಗ್ಗೆ ದಿನಾಂಕ 2.2.1995 ರಂದು ಹೊರಡಿಸಲಾದ ಸಿಎಂಡಬ್ಲ್ಯೂ 11ಸಿಎಲ್‌ಎಂ 95ರ ಆದೇಶ.

5) ದಿ ಬಿ.ಇ.ಎಂ.ಎಲ್. ನೌಕರರ ಸಹಕಾರ ಸಂಘ ನಿಯಮಿತ, ಬೆಂಗಳೂರು ಇದಕ್ಕೆ ವಿನಾಯಿತಿ ನೀಡಿರುವ ಬಗ್ಗೆ ದಿನಾಂಕ 14.2.1995 ರಂದು ಹೊರಡಿಸಲಾದ ಸಿಎಂಡಬ್ಲ್ಯೂ 14 ಸಿಎಲ್‌ಎಂ 95ರ ಆದೇಶ.

6) ಬೆಂಗಳೂರು ಜಿಲ್ಲಾ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ, ಬೆಂಗಳೂರು ಇದಕ್ಕೆ ಅಧ್ಯಕ್ಷರು, ಉಪಾಧ್ಯಾಕ್ಷರು ಹಾಗೂ ಪದಾಧಿಕಾರಿಗಳ ಚುನಾವಣೆಯನ್ನು ಮುಂದೂಡಿರುವ ಬಗ್ಗೆ ದಿನಾಂಕ 25.5.1995 ರಂದು ಹೊರಡಿಸಲಾದ ಸಿಎಂಡಬ್ಲ್ಯೂ 78 ಸಿಎಲ್‌ಎಂ 95ರ ಆದೇಶ.

1962ರ ಉಗ್ರಾಣ ನಿಗಮದ ಕಾಯ್ದೆಯ 31(11)ನೇ ಕಲಮಿನ ಮೇರೆಗೆ.

7) 1992-93ನೇ ಸಾಲಿನ ಕರ್ನಾಟಕ ರಾಜ್ಯ ಉಗ್ರಾಣ ನಿಗಮದ 35ನೇ ವಾರ್ಷಿಕ ವರದಿ ಮತ್ತು ಪರಿಶೋಧಿತ ಲೆಕ್ಕ ಪತ್ರಗಳನ್ನು ಮಂಡಿಸುತ್ತೇನೆ.

XVIಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿ)

(ಶ್ರೀ ಎಸ್. ನಂಜಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿ) ಅವರ: ಪರವಾಗಿ : ಮಾನ್ಯ ಅಧ್ಯಕ್ಷರೆ,

1956ರ ಕಂಪನಿಗಳ ಕಾಯ್ದೆಯ 619ಎ ಕಲಮಿನ ಮೇರೆಗೆ.

1988-89, 1989-90, 1990-91 ಹಾಗೂ 1991-92ನೇ ಸಾಲುಗಳ ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತದ 16,17,18 ಹಾಗೂ 19ನೇ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ.

XVIಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿ)

(ಶ್ರೀ ಹೆಚ್.ವೈ. ಮೇಟಿ (ಅರಣ್ಯ ಮಂತ್ರಿ) ಅವರ: ಪರವಾಗಿ : ಮಾನ್ಯ ಅಧ್ಯಕ್ಷರೆ,

1956ರ ಕಂಪನಿಗಳ ಕಾಯ್ದೆಯ 619ಎ ಕಲಮಿನ ಮೇರೆಗೆ.

1993-94ನೇ ಸಾಲಿನ ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತದ 21ನೇ ವಾರ್ಷಿಕ ವರದಿ (ವಿಳಂಬಕ್ಕೆ ಕಾರಣಗಳೊಂದಿಗೆ) ಯನ್ನು ಮಂಡಿಸುತ್ತೇನೆ.

XVIಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿ)

(ಶ್ರೀ ಎಸ್.ಡಿ. ಜಯರಾಂ (ಗಣಿ ಮತ್ತು ಭೂ ವಿಜ್ಞಾನ ಮಂತ್ರಿ)ಅವರ : ಪರವಾಗಿ :ಮಾನ್ಯ ಅಧ್ಯಕ್ಷರೆ,

1957ನೇ ಇಸವಿಯ ಗಣಿ ಮತ್ತು ಖನಿಜ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 28(3)ನೇ ಕಲಮಿನ ಮೇರೆಗೆ.

1994ನೇ ಇಸವಿ ಕರ್ನಾಟಕ ಸಣ್ಣ ಗಣಿಗಳ ರಿಯಾಯಿತಿ ನಿಯಮಕ್ಕೆ ತಿದ್ದುಪಡಿ ಸಂಬಂಧದಲ್ಲಿ ದಿನಾಂಕ 6.5.1995 ರಂದು ಹೊರಡಿಸಲಾದ ಸಂಖ್ಯೆ ಸಿಐ 418 ಎಂಆರ್‌ಸಿ 92ರ ಅಧಿಸೂಚನೆಯನ್ನು ಮಂಡಿಸುತ್ತೇನೆ,

XIX.ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿ)

(ಶ್ರೀ ಪಿ.ಸಿ. ಸಿದ್ದನಗೌಡರ್ (ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಪರಿಸರ ಮತ್ತು ಜೀವಿ ಪರಿಸ್ಥಿತಿ ಶಾಸ್ತ್ರ ರಾಜ್ಯ ಮಂತ್ರಿ) ಅವರ: ಪರವಾಗಿ ಮಾನ್ಯ ಅಧ್ಯಕ್ಷರೆ,

1974ರ ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮದ 39(2)ನೇ ಕಲಮಿನ ಮೇರೆಗೆ

1993-94ನೇ ಸಾಲಿನ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವಾರ್ಷಿಕ ವರದಿ.

1974ರ ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮದ 40(7)ನೇ ಕಲಮಿನ ಮೇರೆಗೆ.

1992-93ನೇ ಸಾಲಿನ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಲೆಕ್ಕ ಪತ್ರ ವರದಿಗಳನ್ನು ಮಂಡಿಸುತ್ತೇನೆ.

XX.ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿ)

(ಶ್ರೀ ಬಸವರಾಜ ರಾಯರೆಡ್ಡಿ (ವಸತಿ ರಾಜ್ಯ ಮಂತ್ರಿ) ಅವರ : ಪರವಾಗಿ ಮಾನ್ಯ ಅಧ್ಯಕ್ಷರೆ, 1962ರ ಕರ್ನಾಟಕ ಗೃಹ ಮಂಡಳಿ ಕಾಯ್ದೆಯ 55(3)ನೇ ಕಲಮಿನ ಮೇರೆಗೆ.

1990-91 ಹಾಗೂ 1991-92ನೇ ಸಾಲುಗಳ ಕರ್ನಾಟಕ ಗೃಹ ನಿರ್ಮಾಣ ಮಂಡಳಿಯ ವಾರ್ಷಿಕ ಲೆಕ್ಕ ಪತ್ರ ತಪಾಸಣಾ ವರದಿಗಳನ್ನು ಮಂಡಿಸುತ್ತೇನೆ.

XXI.ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿ)

(ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬಂದರು ಮತ್ತು ಮೀನುಗಾರಿಕಾ ರಾಜ್ಯ ಮಂತ್ರಿ) ಅವರ: ಪರವಾಗಿ : ಮಾನ್ಯ ಅಧ್ಯಕ್ಷರೆ,

1956ರ ಕಂಪನಿಗಳ ಕಾಯ್ದೆಯ 619ಎ ಕಲಮಿನ ಮೇರೆಗೆ.

1993-94 ಹಾಗೂ 1994-95 (28.2.1995ರವರೆಗೆ) ನೇ ಸಾಲುಗಳ ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ.

ಕಾರ್ಯದರ್ಶಿಯವರ ವರದಿ

ಕಾರ್ಯದರ್ಶಿ : ಕಳೆದ ಅಧಿವೇಶನದಲ್ಲಿ ಒಪ್ಪಿಸಿದ ವರದಿಯ ನಂತರ ರಾಜ್ಯಪಾಲರಿಂದ ಅಥವಾ ರಾಷ್ಟ್ರಾಧ್ಯಕ್ಷರಿಂದ ಸಂದರ್ಭಾನುಸಾರವಾಗಿ ಒಪ್ಪಿಗೆಯನ್ನು ಪಡೆದಿರತಕ್ಕ ವಿಧೇಯಕಗಳ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಕ್ರಮ ಸಂಖ್ಯೆ	ವಿಧೇಯಕದ ಹೆಸರು	ಒಪ್ಪಿಗೆಯನ್ನು ಪಡೆದ ದಿನಾಂಕ	ಒಪ್ಪಿಗೆಯನ್ನು ನೀಡಿದವರು
1.	ಕರ್ನಾಟಕ ಸ್ಟಾಂಪ್ (ತಿದ್ದುಪಡಿ) ವಿಧೇಯಕ 1995	31.3.1995	ರಾಜ್ಯಪಾಲರು